ಅಪರಂಜಿ

ತಿಳಿನಗೆಯ ಕಾರಂಜಿ




ಬೆಳ್ಳಿ ಹಬ್ಬದ ವರ್ಷ

ಡಿಸೆಂಬರ್ - 2008



ನಮ್ಮ ಗಣಿತ ಪ್ರಭೃತಿಯ ಲೆಕ್ಕ

ಪ್ರಶ್ನೆ: X ಕಂಡುಹಿಡಿಯಿರಿ



ಇಲ್ಲೇ ಇದೆಯಲ್ಲಾ


ಬಿಡಿ ಪ್ರತಿ: ರೂ. 10.00

ಅಪರಂಜಿ



ತಿಳಿನಗೆಯ ಕಾರಂಜಿ

ಚಂದಾ ವಿವರ:
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-
ಕೆಲಸದ ವೇಳೆ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ
ಮುದ್ರಣ: ರವಿ ಗ್ರಾಫಿಕ್ಸ್
ಅಕ್ಷರ ಜೋಡಣೆ:
ಒಮೇಗಾ ಲೇಸರ್ ಟೆಕ್



ಸಂಪುಟ 26
ಸಂಚಿಕೆ - 3
ಡಿಸೆಂಬರ್ - 2008

ಈ ಸಂಚಿಕೆಯಲ್ಲಿ.....

ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: aparanji@hotmail.com website: aparanjimag.com

ಸಂಪರ್ಕ ವಿಳಾಸ: ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಜಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 808-26688488. email: brmurthy@dataone.in



○ ಪ್ರಕಾಶ್

ರೈಲ್ವೆ ಇಲಾಖೆ ಪೋಲೀಸ್ ಪೇದೆ ಹುದ್ದೆ; ಬೇರೊಬ್ಬನಿಂದ ಪರೀಕ್ಷೆ ಬರೆಸಿದ ಅಭ್ಯರ್ಥಿ-ಸುದ್ದಿ

• ಎಲ್ಲೋ ಹಳಿ ತಪ್ಪಿದೆ!

★★★

ಸಿದ್ದು ರಹಸ್ಯ ಸಭೆ - ಪತ್ರಿಕೆ

• 'ರಹಸ್ಯ' ಎಲ್ಲಿ ಬಂತು?!

★★★

ನಲವತ್ತು ಶತಕಗಳ ಸ್ಥಿತಪ್ರಜ್ಞನಿಗೆ ಅಪರಂಜಿಯ ಪಿಚ್ ಪೂರ್ವಕ ಅಭಿನಂದನೆಗಳು!!

★★★

'A Lot of Bushes have to be cleaner at the white House' ಅಂತ ಅಪರಂಜಿ ನಕ್ಕಳಂತೆ !!

★★★

ಲೋಕಾಯುಕ್ತ ಬಲೆಗೆ ಬಿದ್ದ B.D.A. ಎಂಜಿನಿಯರ್ - ಸುದ್ದಿ

• ಅವರು ಬಿ.ಡಿ.ಎ-ನ್ನನು, ಅಂತ ಗೋಗರೆದರಂತೆ !!

★★★

ರಾಗ-ರತ್ನ ಜೋಷಿಯವರಿಗೆ ನಮ್ಮ ಅಭಿನಂದನೆಗಳು!


★★★

'ಒಬಾಮೊ ಸ್ಫೂರ್ತಿದಾಯಕ' - ಕಾಂಡೋಲೀಸಾ ರೈಸ್

• ಗೆದ್ದೆತ್ತಿನ...?!

★★★

ಕೊರವಂಜಿ ಕಾರ್ನರ್.....



ಏನ್ ರಾಯರೇ ಹೊರಟಿರಿ?
ಜವಾನನ ಕೈಲಿ ಕಾಗದ ಕೊಟ್ಟಿದ್ದೆ. ಟಪಾಲಿಗೆ ಹಾಕಲು-
-ಸರಿಯಾಗಿ ಹಾಕುತ್ತಾನೋ ಇಲ್ಲವೋ ನೋಡುಕ್ಕೆ ಹೋಗುತ್ತಿದ್ದೇನೆ.

ಒಬಾಮಾ ವಿಜಯ

- ಶಿವು

ವಿತ್ತ ಸ್ಥಿತಿಯದು ತಳವ ಮುಟ್ಟಿರೆ
ಕತ್ತೆ ಪಕ್ಷದ ಹಿಲರಿ ಅತ್ತೆಯು
ಗತ್ತಿನಿಂದಲೆ ಬಂದು ನಿಂದಳು ಚುನವಣಾ ಕಣಕೆ
ಎತ್ತ ನೋಡಿದರಲ್ಲಿ ಜನಗಣ
ಸುತ್ತ ಎಲ್ಲೆಡೆ ತನ್ನ ಹೊಗಳಿಪ
ಹತ್ತು ಹಲವರ ಮಾತು ಆಕೆಗೆ ಮದಿರೆಯಾಗಲ್ಕೆ

ನೆರೆಯ ಇಲಿನಾಯ್ ರಾಜ್ಯದಿಂದಲೆ
ನೆರೆದ ಭಕ್ತರ ಮನವ ತಣಿಸುತ
ಹಿರಿಯ ನಾಯಕ ರೂಪದಿಂದಲಿ ಬಂದ ಬರಕೊಬಮ
ಬರುವ ಚುನವಣೆ ಬಹಳ ಶ್ರೇಷ್ಠವು
ಕರಿಯ ಜನಗಳ ಆಶೆ ಇಂದಿಗೆ
ಗರಿಯ ಕೆದರುತ ಹಬ್ಬಿ ಹರಡಿದೆ ನಮ್ಮ ರಾಷ್ಟ್ರದಲಿ

ನೀವು ಈರ್ವರು ನಮ್ಮ ಕಣ್ಗಳು
ನೀವೆ ಜಗಳವ ಮಾಡೆ ಸಲ್ಲದು
ದೇವರಾಣೆಗು ಜಗಳ ನಿಲ್ಲಿಸಿ ಬರಕನಾರಿಸಿರಿ
ಕಾವು ಸಹಜವು ಪಂದ್ಯ ಬಿಸಿಯಿರೆ
ತಾವು ಮಾಡುವ ಆಯ್ಕೆ ಯಿಂದಲೆ
ನಾವು ಬೆಳೆಸಿಹ ಕತ್ತೆ ಪಕ್ಷವು ಜಯವ ಸಾಧಿಪುದು





ಆನೆ ಪಕ್ಷದ ಜಾನ ಮೆಕ್ಕೆನ
ತಾನು ವಿಜಯವ ಗಳಿಸೆ ತೀರುವೆ
ನೆನುತ ಕರೆಸಿದ ತನ್ನ ಸನಿಹಕೆ ಸಾರ ಪೇಲಿನಳ
ಏನು ಯಾರಿದು ರೂಪ ಸುಂದರಿ
ತಾನೆ ತನ್ನನು ಕರೆದು ಪಿಟ್‌ಬುಲ್
ಶಾನೆ ಜನಗಳ ಮೋಡಿಮಾಡಿದಳೆಮ್ಮ ಸಾರಮ್ಮ

ಎಲ್ಲ ಸಿರಿಯದು ಜನರ ಆಸ್ತಿಯು
ಮೆಲ್ಲ ಮೆಲ್ಲನೆ ದೀನ ಜನತೆಯ
ಗೆಲ್ಲಿಸುತ್ತಲೆ ನ್ಯಾಯ ಕೊಡಿಸುವುದೆಮ್ಮ ತೆರಿಗೆಗಳು
ನಲ್ಲಿ ರಿಪೇರಿಯ ಜೋದ ಪ್ಲಮ್ಮರ್
ಅಲ್ಲಿ ಬರಕನ ಜೊತೆಗೆ ಹರಟಿದ
ಸಿಲ್ಲಿ ಮಾತನೆ ತನ್ನ ಪ್ರಚರಕೆ ಬಳಸಿದಾ ಮೆಕ್ಕೇನ್

ಹಳೆಯ ವೈಷಮ್ಯಗಳ ಉರಿಯದು
ಬಳಿಕ ಮುಂದಕೆ ಪಡೆವ ರೂಪವ
ಇಳೆಯ ಜನಗಣ ಕುಳಿತು ನೋಡಿತು ಟೀವಿ ಮುಂದುಗಡೆ
ಆಳ ಸಂಚಿನ ಜಾಣ ಬರಕನು
ಜಾಲ ಬೀಸಲು ಜನರ ಒಮ್ಮತ
ಮೇಳವಿಸುದುದು ಆಯ್ಕೆಯಾದನು ಧೀರ ಬರಕೊಬಮ

ಕುಣಿದು ಹರ್ಷದಿ ನಗುತ ದಣಿದರು
ಗಣಿತ ತಮ್ಮಯ ಗುರಿಯ ಕಾಣಲು
ಮಣಿದು ಲಿಂಕನ್ ಮಾರ್ಟಿನ್ ಲೂಥರ್ ಪಾದ ಪಂಕಜಕೆ
ಪಣವನಿಟ್ಟವ ರೆಲ್ಲ ವಿಜಯರು
ಕಣಸು ಕಾಣುವ ಕಾಲ ಸಲ್ಲಲು
ಬಣದ ಸಂತಸ ಕಂಡು ನಲಿದರು ಎಲ್ಲ ಅಮೆರಿಕರು

ಹಿಂದುಳಿದಿರುವ ಹಿಂದೂಗಳು

- ಲೀಲಾ ಮಿರ್ಲೆ

ಕೆಲವು ದಿನಗಳ ಹಿಂದೆ ನನ್ನ ಸ್ಟೂಡೆಂಟ್ ಶಾಂತಳ ಮದುವೆಯಾಯಿತು. ಇನ್‌ವಿಟೇಶನ್ ಕೊಟ್ಟು 'ಖಂಡಿತ ಬನ್ನಿ' ಎಂದು ತುಂಬಾ ವಿಶ್ವಾಸದಿಂದ ಕರೆದಿದ್ದಳು. ಸರಿ, ಹೋಗೋಣವೆಂದು ನಿಶ್ಚಯಿಸಿದೆ. ಇಂತಹ ಮದುವೆಗಳಿಗೆ ಹೋಗುವುದೆಂದರೆ ನನಗೆ ಬಲು ಖುಷಿ. ಕಾರಣ, ಅಲ್ಲಿ ಯಾರ ಪರಿಚಯವೂ ಇರುವುದಿಲ್ಲ, ಹಾಗಾಗಿ ಮದುವೆ ಮನೆಯಲ್ಲಿ ಇಲ್ಲದ small talk ಮಾಡುವ ಪ್ರಮೇಯವೇ ಬರುವುದಿಲ್ಲ, ಯಾರನ್ನೂ ನೋಡಿ ಹಲ್ಲುಕಿರಿಯಬೇಕಾಗಿಲ್ಲ. ನೆಟ್ಟಗೆ ಹೋಗಿ ಮದುಮಕ್ಕಳನ್ನು ಆಶೀರ್ವಧಿಸಿ, ನಂತರ ನಿಧಾನವಾಗಿ ಬುಫೆ ಊಟ ಮಾಡಿ, ಬೀಡಾ ತಿಂದು ಹಿಂತಿರುಗುವುದು ಅಷ್ಟೆ. ಒಂದು ತರಹ ಹೋಟೇಲಿಗೆ ಹೋಗಿ ಊಟಮಾಡಿ, ಹಣ ತೆರದೆ ಬಂದ ಹಾಗೆ!

ಶುಕ್ರವಾರ ಸಾಯಂಕಾಲ ಮದುವೆ ಮನೆಗೆ ಹೋದೆ. ಜನ ಇನ್ನೂ ಸೇರುತ್ತಿದ್ದರು. ವಧು ಇನ್ನೂ ಬಂದಿರಲಿಲ್ಲ. ಬೆಂಗಳೂರಿನಲ್ಲಿ ಈಚೆಗೆ ಇದು ತಂಬಾ ಸಾಮಾನ್ಯ. ಮದುವೆಯ ಹುಡುಗಿ Beauty Parlorಗೆ ಹೋಗಿ, ಅಲ್ಲಿ ಶೃಂಗರಿಸಿಕೊಂಡು, traffic ಗಲಾಟೆಯಲ್ಲಿ ಬರಬೇಕಾದರೆ, time keep up ಮಾಡುವುದು ಅಪರೂಪ.

ಸರಿ, ಅಲ್ಲೇ ಕುಳಿತಿದ್ದ ಕೆಲವು ಹೆಂಗಸರ ಮಧ್ಯೆ ಹೋಗಿ ಕುಳಿತೆ. ಹಾಯಾಗಿ ಕುಳಿತು, ಅವರಿವರ ಮಾತು ಕೇಳಿಸಿಕೊಳ್ಳಲು ಬಹಳ ಚೆನ್ನಾಗಿರುತ್ತದೆ. ಆದರೆ ನನ್ನ ಗ್ರಹಗತಿ ಚೆನ್ನಾಗಿರಲಿಲ್ಲ, ಪಕ್ಕದಲ್ಲಿ ಕುಳಿತ ಸುಮಾರು 60-65 ವರ್ಷದ ಆಕೆ, ನನ್ನನ್ನು ನೋಡಿ "ನಿಮ್ಮನ್ನ ಎಲ್ಲೋ ನೋಡಿದ ಹಾಗಿದೆ, ನೀವು ಯಾರು ಹೇಳಿ" ಎಂದರು. ನಾನು ಯಾರೆಂದು ಹೇಳಲಿ? ಹಿಂದಿನ ದಿನ ಶ್ರೀ ರಮಣ ಮಹರ್ಷಿಯವರ ಪುಸ್ತಕ ಓದುತ್ತಾ, "ನಾನು" ಎಂದರೆ ಯಾರು? "ನಿನ್ನನ್ನು ನೀನು ಮೊದಲು ತಿಳಿದು ಕೊ" ಮುಂತಾದೆಲ್ಲವನ್ನೂ ಓದಿ Confuse ಆಗಿತ್ತು. ಈಕೆ ಈಗ ಕೇಳುವ ಪ್ರಶ್ನೆಗೆ ಶ್ರೀ ರಮಣರ ಪ್ರಕಾರ "ನಾನು" ಯಾರೆಂದು ಇನ್ನೂ ನನಗೆ ಗೊತ್ತಿಲ್ಲ ಎಂದು ಹೇಳಬೇಕು. ಸಧ್ಯ, ಹಾಗೆ ಹೇಳಿ ಗೊಂದಲ ಎಬ್ಬಿಸುವ ಬದಲು, "ನಾನು ಶಾಂತಳ ಕಾಲೇಜು ಲೆಕ್ಚರರ್. ಶಾಂತ ತುಂಬ ಜಾಣೆ, ಒಳ್ಳೆ ಹುಡುಗಿ" ಎಂದೆ.

ಅದಕ್ಕೆ ಆಕೆ ಉತ್ತರವಾಗಿ "ಅಯ್ಯೋ, ಏನಾದರೆ ಏನು ಮದುವೆ ಗೊತ್ತಾದ್ದಾಗಿನಿಂದ ಎಲ್ಲರಿಗೂ ಬೇಜಾರು" ಎಂದರು. ಎಲ್ಲಿ ಬಂದು ಕುಳಿತೆನಪ್ಪ, ಯಾರೊ ತೀರ gossip monger. ಮದುವೆ ಮನೆಯಲ್ಲಿ ಮದುವೆ ಹುಡುಗಿಯ ಬಗ್ಗೆ ನೆಗೆಟೀವ್ ಆಗಿ ಮಾತನಾಡೋದು ತುಂಬಾ ತಪ್ಪು, ಏನನ್ಯಾಯ ಎಂದು ಬೇಜಾರು ಆಯಿತು.

ಆಕೆ ಮುಂದುವರಿಸಿದರು "ನೋಡಿ, ಅವಳು ಅಮೇರಿಕಾದಲ್ಲಿ ಓದುತ್ತಿದ್ದಾಗ, ಅಲ್ಲಿ meet ಮಾಡಿದಳಂತೆ. ಅವನನ್ನೇ ಮದುವೆಯಾಗುತೀನಿ ಅಂತ ಹಠ. ಪಾಪ ತಂದೆ ತಾಯಿ ಏನ್ ಮಾಡ್‌ತಾರೆ" ಎಂದರು.

ಶಾಂತ ಯಾರೊ ಅಮೇರಿಕನ್ ಅನ್ನು ಮದುವೆ ಆಗುತ್ತಿರಬೇಕು. ಅದಕ್ಕೆ ಈ ರಂಪ ಎಂದು ಕೊಂಡೆ. ತಕ್ಷಣ Invitation Card ನಲ್ಲಿ ಹುಡುಗನ ಹೆಸರೇನಿತ್ತು ಎಂದು ಯೋಚಿಸಲು ಶುರುಮಾಡಿದೆ. ನಾನು ಯಾವತ್ತೂ, ಏನನ್ನೂ ಸರಿಯಾಗಿ observe ಮಾಡಲ್ಲ. Invitation ನಲ್ಲಿ ನಾನು ನೋಡಿದ್ದು ಮದುವೆಯ ತಾರೀಖು, ಸ್ಥಳ, ವೇಳೆ ಇಷ್ಟೆ ಖಂಡಿತ ಹುಡುಗನ ಹೆಸರನ್ನು ಗಮನಿಸಿರಲಿಲ್ಲ.

ಅಷ್ಟರಲ್ಲಿ ಆಕೆ ಪಿಸುಮಾತಿನಲ್ಲಿ ಮುಂದುವರಿಸಿದರು. "ನೋಡಿ ಶಾಂತನ ಮನೆಯವರು ಮಾಧ್ವರು, ಹುಡುಗನ ಕಡೆಯವರು ಸ್ಮಾರ್ತರು" ಅಂತ. ಅಯ್ಯೋ, ಇಷ್ಟೇನೆ. ಯಾವ ಕಾಲದಲ್ಲಿ ಇದ್ದಾಳೆ ಈಕೆ ಎನ್ನಿಸಿತು. ಆದರೆ ಈ ಕಾಲದಲ್ಲಿ ಇಂಥಹವರ ಸಂಖ್ಯೆ ಕಮ್ಮಿ ಎಂದು ಸಮಾಧಾನ ಮಾಡಿಕೊಂಡೆ.

★★★

ದೊಡ್ಡಬಳ್ಳಾಪುರದಲ್ಲಿ ನಮ್ಮ ಹಳೇ ಸ್ನೇಹಿತರಾದ ವೆಂಕಟೇಶ ಮೂರ್ತಿಯವರು ಇದ್ದಾರೆ. ನಮ್ಮನ್ನೆಲ್ಲಾ ಅವರ ಮನೆಗೆ ಎಷ್ಟೋ ದಿನದಿಂದ ಆಹ್ವಾನಿಸುತ್ತಿದ್ದರು. ಒಂದು ಭಾನುವಾರ ನಮ್ಮ ಮನೆಯವರೆಲ್ಲಾ ಕಾರಿನಲ್ಲಿ ಬೆಳಗ್ಗೆ ದೊಡ್ಡಬಳ್ಳಾಪುರಕ್ಕೆ ಹೊರೆಟೆವು. ದೊಡ್ಡಬಳ್ಳಾಪುರ ಸೇರಿದ ಮೇಲೆ ಅಡ್ರಸ್ ಹಿಡಿದು ಮನೆ ಹುಡುಕಲಾರಂಭಿಸಿದೆವು. Main Road, Cross Roadಗಳ ಗಲಾಟೆಯಲ್ಲಿ, ಎಷ್ಟೊತ್ತಾದರೂ ಮನೆ ಸಿಗಲಿಲ್ಲ. ಕೊನೆಗೆ ದಾರಿಯಲ್ಲಿ ನಿಂತಿದ್ದ ಒಬ್ಬಾತನನ್ನು, ಈ ವಿಳಾಸ ಎಲ್ಲಿ ಬರುತ್ತೆ, ಹೆಸರು ವೆಂಕಟೇಶಮೂರ್ತಿ ಅಂತ, ಎಂದು ನನ್ನ ತಮ್ಮ ಕೇಳಿದ. "ವೆಂಕಟೇಶ ಮೂರ್ತಿ ಅಂದ್ರಾ, ಅವರು ಬ್ರಾಹ್ಮಣರೊ, ವೈಶ್ಯರೊ" ಎಂದು ಕೇಳಿದರು ಆತ. "ವೈಶ್ಯರು" ಎಂದ ಮೇಲೆ, "ಓ, ಅವರ ಮನೆ ಇಲ್ಲೇ ಇದೆ. ನೋಡಿ ಆ ಅಡಕೆಮರ ಇದೆಯಲ್ಲಾ, ಆ ಮನೆನೇ" ಎಂದ ಆತ.

ನಮಗೆಲ್ಲಾ ಶಾಕ್, ಊರಿನ ನಾಗರೀಕರನ್ನು ಇನ್ನೂ ಜಾತಿಯಿಂದಲೇ ಗುರುತಿಸುತ್ತಿರುವುದನ್ನು ನೋಡಿ, ಯಾವ ಯುಗದಲ್ಲಿ ಇದ್ದೇವೆ. ಅನ್ನಿಸಿತು!


★★★

ಮೊನ್ನೆ ಒಂದು ಸಂತೋಷ ಕೂಟಕ್ಕೆ ಹೋಗಿದ್ದೆ. ಗೆಳತಿ ವಿಜಯ ಮಿಸೆಸ್. ಅಕ್‌ಬರ್ ಎನ್ನುವವರನ್ನು ಪರಿಚಯಿಸಿದರು. ಅವರೊಂದಿಗೆ ಅದೂ ಇದೂ ಮಾತನಾಡುತ್ತಿದ್ದಾಗ, ಆಕೆ ಅವರ ಮಕ್ಕಳ ಹೆಸರು ಸಂತೋಷ್ ಮತ್ತು ಈಶಾನ್ ಎಂದರು. ಹಿಂದೂ ಹೆಸರುಗಳನ್ನು ಕೇಳಿ, ನನ್ನ ಅರಿವಿಲ್ಲದೆಯೇ ನನ್ನ ಮುಖದ ಮೇಲೆ ಆಶ್ಚರ್ಯ ವ್ಯಕ್ತಪಟ್ಟಿರಬೇಕು. "You See, it is much better to give such names, they can mix better" ಎಂದು ಇಷ್ಟೇ ಹೇಳಿ ಸುಮ್ಮನಾದರು.

ಅದರ ಹಿಂದಿನ ಅರ್ಥ ತೀರ ಸ್ಪಷ್ಟ ಅಲ್ಪಸಂಖ್ಯಾತರು ಅವರ ಮಕ್ಕಳ ಭವಿಷ್ಯವನ್ನು ಸುಧಾರಿಸಲು ಯಾವ ಯಾವ ತಂತ್ರಗಳನ್ನು ಹೂಡಬೇಕಾಗುತ್ತದೆ ಎನ್ನುವುದು ಖಚಿತವಾಯಿತು. ಇವರೆಲ್ಲಾ ನಮ್ಮ ಹಾಗೆ ಮಧ್ಯಮ ವರ್ಗದ ಸಂಸಾರಿಕಸ್ತರು. ಯಾವುದೊ

ಕಾಲದಲ್ಲಿ ಗೋರಿ ಮಹಮ್ಮದ್, ಗಜನಿ ಮಹಮ್ಮದ್ ಮಾಡಿದ ತಪ್ಪನ್ನು ನಮ್ಮವರು ಇನ್ನೂ ಮರೆತಿಲ್ಲ ಎಂದಂತಾಯಿತು.

ಈ ಹಿನ್ನೆಲೆಯಲ್ಲಿ, ಈಚೆಗೆ ಒಬಾಮ ಅಧ್ಯಕ್ಷರಾದಾಗ ನನಗೆ ಸಂತೋಷದ ಜೊತೆಗೆ ನಾಚಿಕೆಯೂ ಆಯಿತು. ನಮ್ಮಲ್ಲಿ ಸೋನಿಯಾ ಗಾಂಧಿ ಪ್ರಧಾನಿಯಾಗಿ ಆಯ್ಕೆ ಯಾಗಲಿದ್ದಾಗ, ಆದ ಗೊಂದಲವೇನು! ಎಲ್ಲಾದರೂ ಉಂಟೆ, ಆಕೆ ಹೊರಗಿನವಳಲ್ಲವೇ? ನಮ್ಮ ಸಂಸ್ಕೃತಿಯ ಬಗ್ಗೆ, ಧಾರ್ಮಿಕ ಗ್ರಂಥಗಳ ಬಗ್ಗೆ ಉದ್ದುದ್ದಾ ಭಾಷಣ ಬಿಗಿಯುತ್ತಾ, ನಾವು 'ವಿಶ್ವ ಕುಟುಂಬ'ಗಳು ಎಂದು ಹೇಳಿಕೊಳ್ಳುತ್ತಾ, ನಮ್ಮ ಸಣ್ಣತನವನ್ನು ವಿಶ್ವಕ್ಕೆ ತೋರಿಸಿದ್ದೇವೆ. ಅಮೇರಿಕನ್ ಪ್ರಜೆಗಳಾದರೊ, ಯಾವ ಫಿಲಾಸಫಿಯನ್ನೂ ಎತ್ತಾಡದೆ, ತಮ್ಮ ವಿಶಾಲ ಮನೋಭಾವವನ್ನು ಪ್ರಪಂಚಕ್ಕೆ ಸ್ಪಷ್ಟಪಡಿಸಿದ್ದಾರೆ. ಹಿಂದೂಗಳು ಇನ್ನೂ ಹಿಂದೆಯೇ ಉಳಿದಿದ್ದಾರೆ ಅಲ್ಲವೆ!



ಇಂಟರ್‌ನೆಟ್ ಕೃಪೆ

ವ್ಯಾಕ್ಸಿನೇಷನ್ ಗಿಡ

- ಶ್ಯಾಮಲ ರವಿಶಂಕರ್

ಇನ್ನು ಎರಡು ವಾರಗಳೊಳಗೆ ನಾನು ಅಮೇರಿಕೆಗೆ ತೆರಳುವವಳಿದ್ದೆ ಆ ಪ್ರಯಾಣದ ಸಿದ್ಧತೆಗಳನ್ನು ಬದಿಗಿರಿಸಿ ಕಾಲೇಜಿನ ಕೆಲಸಗಳನ್ನು ಮುಗಿಸಲು ಪ್ರಾಮುಖ್ಯತೆ ಕೊಟ್ಟೆ (ಕೂಡಲೇ ಬೇಕಲ್ಲಾ, ಅದಕ್ಕೆ ಅಷ್ಟೆ). ಒಂದು ದಿನ ಇದ್ದ ಬಿದ್ದ ಕೆಲಸಗಳನ್ನೆಲ್ಲಾ ಬಿಟ್ಟು ನಮ್ಮ ಪ್ರಿನ್ಸಿಪಾಲರೂ ಮತ್ತು ನಾನು ವಿ.ಸೀ. ಸಾಹೇಬರು ಕರೆದಿದ್ದ ತುರ್ತು ಮೀಟಿಂಗ್‌ಗೆ ಹೋಗಬೇಕಾಗಿ ಬಂತು. ಹಿಂತಿರುಗುವಾಗ ಪ್ರಿನ್ಸಿಪಾಲರು ನನ್ನನ್ನು ಅವರ ಕಾರಿನಲ್ಲಿ ಕರೆತರುತ್ತಾ, "ಏನಮ್ಮಾ ಹೇಗೆ ನಡೀತಿದೆ ನಿನ್ನ ಪ್ರಯಾಣದ ತಯಾರಿ? ಆಯ್ತಾ MMR Vaccination or?" ಎಂದರು. ಒಮ್ಮೆಲೇ ಇದೆಂತ ತಕರಾರು ಬಂತಪ್ಪಾ ಅನ್ನಿಸಿತು.

'ಇಲ್ಲಾ, ಸಾರ್ ಅವಕ್ಕೆಲ್ಲಾ ಟೈಂ ಎಲ್ಲಿ, ಇಷ್ಟಕ್ಕೂ ಅದೇನು ಮ್ಯಾಂಡೇಟರಿ ಅಲ್ಲವಲ್ಲಾ?' ಅಂದೆ.

'ಹೇಳೋಕೆ ಆಗೋಲ್ಲಮ್ಮಾ. ಒಂದೊಂದು ಸಲ ಆ ಐ.ಎನ್.ಎಸ್. ಅಧಿಕಾರಿಗಳು MMR ಸರ್ಟಿಫಿಕೇಟ್ ಇಲ್ಲಾಂತ ವಾಪಸ್ ಹೊರಡೋ ಮೊದಲನೇ ಫ್ಲೈಟ್‌ನಲ್ಲಿ ರವಾನಿಸಿ ಬಿಡ್ತಾರೆ. ಮಾಡಿಸ್ಕೊಂಡ್ಬಿಡು ಈ ವ್ಯಾಕ್ಸಿನೇಷನ್‌ನ ಯಾವ್ದಿರಲಿ ಬಿಡಲಿ ಇದು ಮಾತ್ರ ಇರಲೇಬೇಕು. ನಿನ್ನ ತರಫಿನಿಂದ ಇಲ್ಲ ಅನ್ಬಾರ್ದು, ಅಷ್ಟೆ' ಅಂದು ನನ್ನನ್ನು ಇನ್‌ಸ್ಟಿಟ್ಯೂಟ್ ಆಫ್ ಪ್ರಿವೆಂಟಿವ್ ಮೆಡಿಸಿನ್‌ನ ಮುಂದೆ ಇಳಿಸಿ ಹೋದರು.

ಗುಣವಾಗದ್ದನ್ನ ಅನುಭವಿಸಲೇ ಬೇಕು! ಸರಿ. ಒಳಗೆ ಹೋಗಿ ಎರಡು ಮಹಡಿಗಳೇರಿ, ನಾಲ್ಕು ಕಾರಿಡಾರ್‌ಗಳನ್ನು ಸವೆಸಿ, ಆರು ತಿರುವುಗಳನ್ನು ತಿರುಗಿ, ಎಂಟು ಕೌಂಟರ್‌ಗಳನ್ನೂ ಹಾಗೂ ಹತ್ತು ಜನರನ್ನೂ ವಿಚಾರಿಸಿದ ಮೇಲೆ ತಿಳಿಯಿತು. ನಾವೇ ವ್ಯಾಕ್ಸೀನ್‌ನ ಖಾಸಗಿ ಅಂಗಡಿಯಲ್ಲಿ ಕೊಂಡು, ಬೆಳಗ್ಗೆ 10 ಘಂಟೆ ಯೊಳಗೆ ಕಾರ್ಡು ಮಾಡಿಸಿ, ಇಂಜಕ್ಷನ್ ಚುಚ್ಚಿಸಿಕೊಂಡು, ಕಾರ್ಡಿನಲ್ಲಿ ಎಂಟ್ರಿ ಹಾಕಿಸಿ, ದೊಡ್ಡ ದೊಡ್ಡವರ ಸಹಿಗಳನ್ನು ಹಾಕಿಸಿಕೊಂಡ ಕಾರ್ಡನ್ನು ವೀಸಾ ಜೊತೆ INS ಆಫೀಸರ್‌ಗೆ ನೀಡಬೇಕು. ನನ್ನ ವಿಮಾನ ಅಲ್ಲಿಯವರೆಗೂ ನನಗಾಗಿ ಕಾದಿರಬೇಕಷ್ಟೆ? ನೀರಿನೊಳಗೆ ಮುಳಿಗಿದ ಮೇಲೆ ಛಳಿಯೇನು? ಗಾಳಿಯೇನು? ಸರಿ, ಮುಂದಿನ ಕೆಲಸವಾದರೂ ಮಾಡೋಣ ಎಂದು ವ್ಯಾಕ್ಸೀನ್‌ನ ಅರಸಿ ಹೊರಟೆ. ಯಾವ ಅಂಗಡೀಗೆ ಹೋದರೂ ಅದು ಸಿಕ್ಕವಲ್ಲದು! ಜೊತೆಗೆ, "ಆ ಅಂಗಡೀಲಿ ಸಿಗ್ತೆ, ಆದರೆ ಹದಿನೇಳು ಕಿ.ಮೀ. ದೂರ. ಇನ್ನೊಂದು ಇಪ್ಪತ್ತೊಂದು ಕಿ.ಮೀ. ದೂರ. ಈಗ ಸಿಗುತ್ತೋ ಇಲ್ಲವೊ ಟ್ರೈ ಮಾಡಿ, ಆದರೆ ಒಂದು ಮಾತು - exping date ಒಳಗೆ ಇರಲಿ. ಅಷ್ಟೆಲ್ಲಾ ಯಾಕೆ, 4-5 ದಿನ ಟೈಂ ಕೊಟ್ರೆ ಕಂಪನಿಯಿಂದ ಸೀದಾ ನಾನೇ ತರಿಸ್ತೀನಿ, ಅದೂ ನಿಮಗಾಗಿ..!" ಎಂಬೆಲ್ಲಾ ಉಪದೇಶಗಳನ್ನು ಕೇಳಬೇಕಾಯ್ತು ಬೇರೆ! ಊರೆಲ್ಲಾ ತಿರುಗಿ ಅಂತೂ ಅದನ್ನು ಸಂಪಾದಿಸಿಕೊಂಡು ಮನೆಗೆ ಮರಳಿದಾಗ ರಾತ್ರಿಯಾಗಿ ಮನೆಮಂದಿಗೆಲ್ಲಾ ಆತಂಕ ತಂದಿದ್ದೆ ಕೂಡ!

ಮಾರನೆಯ ದಿನ ಈ ಕಾಲದಾರ್ ಇತ್ಯಾದಿಗಳ action replay ಆಗಿ ಇಂಜಕ್ಷನ್ ಚುಚ್ಚಿಸಿ ಕೊಂಡು ಹೊರ ಬರುವ ಮುನ್ನ ಕಾರ್ಡನ್ನು ಅವರಿಗೆ ಅರ್ಪಿಸಿದೆ. 'ಈಗ ಬಾ', 'ಆಗ ಬಾ' ಎಂದಾಗೆಲ್ಲಾ ಅವರ ಆಜ್ಞೆಗಳನ್ನು ಚಾಚೂ ತಪ್ಪದೆ ಅನುಸರಿಸಿದ ಮೇಲೆ ದೊಡ್ಡ, ಇನ್ನೂ ದೊಡ್ಡ, ಮತ್ತೂ ದೊಡ್ಡ ಮೂರು ಅಧಿಕಾರಿಗಳ ಸಹಿ, ಠಸ್ಸೆಗಳನ್ನು ಹೊತ್ತ ನನ್ನ ಕಾರ್ಡು ನನ್ನ ಕೈ ಸೇರಿದಾಗ ನನ್ನ ಪ್ರಯಾಣಕ್ಕೆ ಇನ್ನೂ ಮೂರು ದಿನ ಉಳಿದಿತ್ತು!

ಈ ತಾಪತ್ರಯಗಳ ನಡುವೆ ವಿಮಾನ ಹತ್ತಿದ್ದೂ ಆಗಿ ಪ್ರಯಾಣಾನೂ ಬೆಳೆಸಿ ಶಿಕಾಗೋದ ಓ ಹೇರ್ ಇಂಟರ್ ನಾಶನಲ್ ವಿಮಾನ ನಿಲ್ದಾಣ ತಲುಪಿದಾಗ ವೀಸಾ ಜೊತೆಗೆ ಹಳದಿ ಬಣ್ಣದಲ್ಲಿ ರಾಜಿಸುತ್ತಿದ್ದ MMR ಕಾರ್ಡನ್ನು ಜೋಡಿಸಿಟ್ಟು ಕೊಂಡು INS ಕೌಂಟರ್‌ನ ಮುಂದಿದ್ದ ಹನುಮಂತನ ಬಾಲದಂತಿದ್ದ ಕ್ಯೂನಲ್ಲಿ ನಾನೇ ಕಟ್ಟಕಡೆಯವಳು! ಇನ್ನೂ ಎಷ್ಟೋ ಹೊತ್ತು ಇದೆ ನನ್ನ ಸರದಿಗೆ ಅಂದ್ಕೊಂಡಾಗ ನಿದ್ದೆ ಮಂಪರು ಹತ್ತಿದಂತಾಯಿತು.

ನನ್ನ ಜನ್ಮದಲ್ಲಿ ಹಾಕಿಸ್ಕೊಂಡ ಇಮ್ಯುನೈಶೇಷನ್ ಅಂದರೆ ಸಿಡುಬಿನದು (Small poxದು)! ಓಂದಕ್ಕೋಡಿತು ಮನಸ್ಸಿನ ಗಡಿಯಾರ! ನಮ್ಮ ತಾತಂದಿರ ಮನೆ ನಂದಗೋಕುಲ. ಯಾವುದೇ ಸಮಯದಲ್ಲಿ ಕನಿಷ್ಠಪಕ್ಷ ಇಪ್ಪತ್ತೈದು ಮೊಮ್ಮಕ್ಕಳಾದರೂ ಇರುತ್ತಿದ್ದ ಮನೆ! ಅವರಲ್ಲಿ ಆದೇ ಆಗ ಹುಟ್ಟಿದ ಮಗುವಿನಿಂದ 25 ವರ್ಷದ ಧಡಿಯರವರೆಗೂ ಅಂತರವಿರಬಹುದು ವಯಸ್ಸಿನಲ್ಲಿ, ನಮ್ಮ ತಾತಂದಿರು ಬಹಳ ಶಿಸ್ತಿನ ಮನುಷ್ಯರು. ಯಾವಾಗ ಏನು ಆಗಬೇಕು ಅನ್ನಿಸುತ್ತೋ ಆಗ ಅದು ಆಗಿ ತೀರಲೇಬೇಕು. ಕೋಪ ಬಂದರೆ ಸೀಮೆಂಟ್ ಕಾನ್‌ಕ್ರೀಟ್ ಬಂಗಲೆಗೆ ಬಂಗಲೇನೇ ನಡುಗಬೇಕು. ಪೇಪರಿನ ವಾರ್ತೆ ಪ್ರಕಾರ ಮುಂಬರಲಿದ್ದ ಬೇಸಿಗೆಯಲ್ಲಿ ಸಿಡುಬು ಸಾಂಕ್ರಾಮಿಕ ವಾಗುವ ನಿರೀಕ್ಷೆ ಇದ್ದು ಎಲ್ಲಾ ಮಕ್ಕಳಿಗೂ ವ್ಯಾಕ್ಸಿನೇಶನ್ ಮಾಡಿಸಲು ಪ್ರೋತ್ಸಾಹಿಸಿತ್ತು ಆಗಿನ ಸರಕಾರ!

ನಮ್ಮ ತಾತಂದಿರ ವ್ಯವಸ್ಥೆಯ ಪ್ರಕಾರ ಈ ಕಾರ್ಯಕ್ರಮ ಒಂದು ದಿನ ನಡದೇ ಹೋಯಿತು! ಅಂದು ಮಲ್ಲೇಶ್ವರಂ ಎಂಟನೇ ಕ್ರಾಸಿನ ಎಲ್.ಎಫ್. ಡಿಸ್ಪೆನ್ಸರಿನಿಂದ ಲಸಿಕೆ ಹೊತ್ತ ಚಿಕ್ಕದಾದರೂ ಭಾರೀ ಕಬ್ಬಿಣದ ಪೆಠಾರಿಯನ್ನು ಹೊತ್ತುಕೊಂಡು ಬಂದನೊಬ್ಬ ಕಾಂಪೌಂಡರ್? ಜೊತೆಯಲ್ಲೊಬ್ಬ ಜೀಟಾಳು. ಅವನ ಕೈಯಲ್ಲಿ ಸ್ಪಿರಿಟ್‌ನಲ್ಲಿ (disinfection ನ ಹೆಸರಿನಲ್ಲಿ!) ಅದ್ದಿ ತೆಗೆದಿದ್ದ ಮೂಸಂಬಿ ಗಾತ್ರದ ಹತ್ತಿಯ ಉಂಡೆ. ಇವರೀರ್ವರಿಗೂ ಕಾಫಿ, ತಿಂಡಿ ಸರಬರಾಜಾಯಿತು. ನಂತರ brinkly business ಕಾಂಪೌಂಡರ್ ಕಬ್ಬಿಣದ ಪೆಟ್ಟಿಗೆಯ ಬೀಗ (!) ತೆಗೆದು ಮುಚ್ಚಳ ತೆಗೆದ. ನಾನು 3-4 ವರ್ಷದವಳಿರಬೇಕು. ಹಿರಿಯರ ಕಾಲಗಳ ಮಧ್ಯೆ ತೂರಿ ನುಸುಳಿದ್ದರಿಂದ ಈ "Operation Immunization"ನ ನೋಡಲಾಯಿತು.

ಅಲ್ಲಿ ಏನೇನೋ ಸಾಮಾನುಗಳಿದ್ದವು. ಹಲವಾರು ಆಕಾರಗಳುಳ್ಳ ಸೂಜಿಗಳೂ, ಮೊಳೆಗಳೂ, ಬಾಟಲ್‌ಗಳೂ, ದ್ರಾವಕಗಳೂ, ಒಂದು ಬುಡ್ಡಿ ದೀಪ ಕೂಡ ಇತ್ತು! ಆ ದೀಪ (ಸ್ಪಿರಿಟ್ ಲ್ಯಾಂಪ್)ವನ್ನು ಹೊರತೆಗೆದು ಕಡ್ಡಿಗೀರಿ ಹೊತ್ತಿಸಿದ ಜೀಟಾಳು. ಒಂದೊಂದಾಗಿ ಕಬ್ಬಿಣದ ಮೊಳೆಗಳನ್ನು ಕೆಂಪಾಗಿ ಕಾಯಿಸಿದ ಕಾಂಪೌಂಡರ್ ಸಾರ್! ಅಷ್ಟರಲ್ಲಿ ತಾತಂದಿರು

ಮೊಮ್ಮಕ್ಕಳನ್ನು ಲೈನಾಗಿ ನಿಲ್ಲಿಸಿದ್ದರು. ಚೀಟಾಳು ಒಬ್ಬೊಬ್ಬ ಮಗುವನ್ನು ಕರೆದು ಎಡ ಮುಂಗೈಗೆ (ಇದ್ದ ಒಂದೇ) ಹತ್ತಿ ಉಂಡೆಯಿಂದ ಸವರಿ ಕಾಂಪೌಂಡರ್ ಸಾರ್ ಕಡೆಗೆ ನೂಕುತ್ತಿದ್ದ. ಕಾಂಪೌಂಡರ್ ಸಾರ್ ಕಾದು ಕೆಂಪಾಗಿದ್ದ ಮೊಳೆಯೊಂದನ್ನು ಯಾವುದೋ ಬಾಟಲಿನಲ್ಲಿದ್ದ ದ್ರಾವಕದಲ್ಲಿ ಅದ್ದಿ 'ಚುಂಯ್, ಚುಂಯ್' ಅಂದ ಮೇಲೆ ಸ್ಪಿರಿಟ್ ಸವರಿದ ಮುಂಗೈ ಮೇಲೆ ಢಾಳಾಗಿ ಕಾಣುವಂತೆ ಎರಡು ಚಕ್ರಗಳನ್ನು ಒತ್ತಿದ. ಒಬ್ಬರ ಹಿಂದೆ ಒಬ್ಬರು ನನ್ನ ಕಸಿನ್ಸ್ ಎಲ್ಲಾ ಚೀತ್ಕಾರ. ಬಂಬ್ಡಿ ಹೊಡೀತಿದ್ದು! ಇವೆಲ್ಲಾ ಕದ್ದು ನೋಡುತ್ತಿದ್ದ ನನಗೆ ಈ ವೃಂದ ಗಾಯನ ಬೇಡವೆಂದು ತಪ್ಪಿಸಿಕೊಳ್ಳುವ ಯತ್ನಮಾಡಿ ತಾತಂದಿರ ಚಾಣಾಕ್ಷತೆಗೆ ಸಿಕ್ಕಿಬಿದ್ದೆ! ನನ್ನ ಚಕ್ರಗಳು ನನ್ನ ಕೈಯನ್ನು ಅಲಂಕರಿಸಲ್ಪಟ್ಟು ನನ್ನ ಗಂಟಲು ಶಕ್ತಿ ಮೀರಿ ಕೆಲಸ ಮಾಡಿತು. ಇಷ್ಟರಲ್ಲಿ ಇನ್ನೊಬ್ಬ ಮೊಮ್ಮೊಗನನ್ನು ಹಿಡಿಯಲು ಹೋದ ತಾತಂದಿರು ನನ್ನನ್ನು ಬಿಡುಗಡೆ ಮಾಡಲೇಬೇಕಾಯಿತು. ತಕ್ಷಣ ಓಡಿದ ನಾನು ಹಸು-ಎಮ್ಮೆಗಳಿಗಾಗಿ ಇಟ್ಟಿದ್ದ ನೀರಿನ ಬಕೆಟ್ಟಿನಲ್ಲಿ ಕೈ ಅದ್ದಿ ರಂಪ ಮಾಡಿದೆ. ಉಂ ಹೂಂ... ಉರಿ ಏನೇನೂ ತಗ್ಗಲಿಲ್ಲ. ಕೆರೆದು ಕುಪ್ಪಳಿಸಿದೆ, ಅದು ಬರುಬರುತ್ತಾ ಇನ್ನೂ ರಣವಾಯಿತೇ ಹೊರತು ಶಮನವಾಗಲಿಲ್ಲ. ನಾಲ್ಕನೇ ದಿನ ಎರಡೂ ಚಕ್ರಗಳು ಊದಿ ಬಂತು ಕೆಂಪಾಗಿ ಕೀವು ಕಟ್ಟಿ ಬೋಂಡಾಗಳಂತಾದವು. ಐದನೇ ದಿನ ಎರಡೂ ಒಂದಾಗಿ 'ಹ' ಒತ್ತಿನಂತಾದವು! ಎಲ್ಲರ ಗಾಯಗಳು ಮಾಯವಾದರೂ, ನನ್ನದು ಮಾತ್ರ ಇದ್ದಂಗೇ ಇತ್ತು.

ಕಾಲಾಯ ತಸ್ಮೈ ನಮಃ. ವರ್ಷಾನುಗಟ್ಟಲೆ ಕಳೆದರೂ ಎಷ್ಟೇ ಮಾಸಿದರೂ ಈಗಲೂ ಕೂಡ ನನ್ನ ಹಾಗೂ ತನ್ನ identifyನ ಉಳಿಸಿಕೊಂಡೇ ಬಂದಿವೇ ನನ್ನ ಮುಂಗೈ ಚಕ್ರಗಳು.

ಇದರಿಂದ ಹೊಸ ಆಟವೊಂದು ನಾವುಗಳು ಕಂಡು ಕೊಂಡೆವು. ಅದೇ ವ್ಯಾಕ್ಸಿನೇಷನ್ ಆಟ. ಮೊಳೆ ಬದಲು ಬೇಡವಾಗಿ ಅಲ್ಲಲ್ಲಿ ಬೆಳೆಯುವ sida (ಸಸ್ಯಶಾಸ್ತ್ರ ಓದಿದ ಮೇಲೆ ತಿಳಿದ ಹೆಸರಿದು) ಎನ್ನುವ ಗಿಡದ ಒಣಕಲು ಕಾಯಿ (ಶೈ ಜೋಕಾರ್ಪ್). ಇದು ನಿಜವಾದ ಚಕ್ರದಂತೆ ಇರುತ್ತದೆ. ನೀರಿನಲ್ಲಿ ನೆನೆದು ಒದ್ದೆ ಮಾಡಿದ ಮುಂಗೈ ಮೇಲೆ ಈ ಕಾಯಿಯನ್ನು ಬಿತ್ತುವುದು. ಇದೇ ಒಂದು ಆಟವಾಯಿತು. ಇದರಿಂದ ಈ ಗಿಡಕ್ಕೆ ನಾನೇ 'ವ್ಯಾಕ್ಸಿನೇಷನ್ ಗಿಡ' ಎಂದು ನಾಮಕರಣ ಮಾಡಿದ್ದೆ. ಯಾವ ಯಾವ ಕಸಿನ್ಸ್‌ಗೂ ಚುಚ್ಚಿದ್ದೇ ಚುಚ್ಚಿದ್ದು!

ಯಾರೋ ನನ್ನ ಬೆನ್ನು ತಟ್ಟಿದಾಗ ಬೆಚ್ಚಿ ಒಮ್ಮೆಲೇ ನಾನೆಲ್ಲಿದ್ದೇನೆ ಅನ್ನೋ ಹಾಗೆ 'ಬೆ ಬೆ ಬ್ಬೇ?' ಅಂದೆ. ನನ್ನ ಮುಂದಿದ್ದ ಕ್ಯೂ ಕರಗಿತ್ತು. ಮುಂದಿದ್ದ ಒಬ್ಬಾತ ಈ ಹಳದೀ ಬಣ್ಣದ್ದು ಕಾರ್ಡು ಏನು ಎಂದು ಕೇಳಿದಾಗ ನಾನು ಓ ಹೇರ್ ಇಂಟರ್‌ನಾಶನಲ್‌ಗೆ ಬಂದೆ!

"ಓ.., ಅದಾ.., ಅದೂ.., ಇದೂ.., ಅಂದು ಕಡೆಗೂ MMR ಸರ್ಟಿಫಿಕೇಟ್" ಅಂದೆ.

"ಅವೆಲ್ಲಾ ತೋರಿಸ್ಬೇಡಿ ಮೇಡಂ. ಎಲ್ಲಿಲ್ಲದ ಪ್ರಶ್ನೋತ್ತರ ನಡೆಸಬೇಕಾಗುತ್ತೆ. ಅವರಾಗೆ ಅದನ್ನೇನೂ ಕೇಳೊಲ್ಲ" ಅಂದರು. ಅಷ್ಟರಲ್ಲಿ ಅವರ ಸರದಿ ಬಂತು. ಆ ಮೇಲೆ ನನ್ನದು! ಈ ಹಳದೀ ಕಾರ್ಡನ್ನು ತೋರಿಸದೇನೇ ನಾನು ವೀಸ ಸ್ಟಾಂಪ್ ಪಡೆದು ಶಿಕಾಗೋ ಮಹಾನಗರದೊಳಗೆ ಕಾಲಿಟ್ಟೆ!

❖

ಹಂದಿ ಬೆಳೆ

- ಎಂ.ಎಸ್. ನರಸಿಂಹಮೂರ್ತಿ

ರಾಮಣ್ಣ ಎಂದರೆ ಬಹಳ ದೊಡ್ಡ ಕುಳ. ಅವನಿಗೆ ಎಷ್ಟು ಜಮೀನಿವೆ ಅಂತ ಅವನಿಗೇ ಗೊತ್ತಿಲ್ಲ. ಕೆಲವು ವರ್ಷಗಳಿಂದ ರಾಮಣ್ಣನಿಗೆ ಜಮೀನಿನ ಬಗ್ಗೆ ಆಸಕ್ತಿಯೇ ಇಲ್ಲ. ಕಾರಣ, ಸುತ್ತ-ಮುತ್ತಲಿನ ಜನರೆಲ್ಲ ತಮ್ಮ ಜಮೀನನ್ನು ಸೈಟುಗಳಾಗಿ ಕನ್ವರ್ಟ್ ಮಾಡಿ ಬಂಗಾರದ ಬೆಲೆಗೆ ಮಾರಿಕೊಂಡಿದ್ದಾರೆ. ಏನಾದರೂ ಮಾಡಿ ರಾಮಣ್ಣನ ಕೈಲಿ ಒಂದಷ್ಟು ಬೆಳೆ ಬೆಳೆಸಬೇಕೂಂತ ವ್ಯವಸಾಯ ಅಧಿಕಾರಿಗಳು ಪ್ರಯತ್ನ ಪಟ್ಟಿದ್ದೂ ಉಂಟು. ಈ ಕಾರಣಕ್ಕೆ ವ್ಯವಸಾಯ ಇಲಾಖೆಯಲ್ಲಿ ಗ್ರಾಮೀಣ ಅಧಿಕಾರಿಯಾಗಿರುವ ವಿಶ್ವ ರಾಮಣ್ಣನ ಮನೆಗೆ ಬಂದ. ರಾಮಣ್ಣ ಆರಾಮವಾಗಿ ಮಲಗಿದ್ದಾನೆ.

ರಾಮಣ್ಣ, ಏಳು, ಯಾಕೆ ಮಲಗಿದ್ದೀಯಲ್ಲ? ನೀನು ಭಾರತೀಯ ರೈತ, ನೀನೇ ನಮ್ಮ ಬೆನ್ನೆಲುಬು ಎಂದು ಡೈಲಾಗ್ ಹೊಡೆದ.

ಬನ್ನಿ ಸ್ವಾಮಿ, ಫ್ಯಾನ್ ಹಾಕಿದ್ದೀನಿ ನೀವೂ ಮಲಕ್ಕೊಳ್ಳಿ. ಎದ್ದು ಏನು ಮಾಡೋದಿದೆ?

ಅರೆರೇ ! ನಾನು ಮಲಕ್ಕೊಳ್ಳೋಕ್ಕಲ್ಲ ಬಂದಿರೋದು. ಅಲ್ಲ ರಾಮಣ್ಣ, ನೀನು ಇಷ್ಟೆಲ್ಲ ಜಮೀನು ಇಟ್ಕೊಂಡು ಯಾಕೆ ಸುಮ್ಮಿದ್ದೀಯಾ? ನಿನ್ನ ಕೈಲಿ ಬೆಣ್ಣೆ ಇದೆ, ತುಪ್ಪ ಮಾಡ್ಕೋ.

ಸ್ವಾಮಿ, ಈ ಕಾಲದಲ್ಲಿ ರೈತನಿಗೆ ಬೋ ಕಷ್ಟ ಆಯ್ತೆ. ಜಮೀನಲ್ಲಿ ಬೆಳೆ ತೆಗೆಯೋಣ ಅಂದ್ರೆ ನೀರಿಲ್ಲ. ಮೂಗಿಗೆ ತುಪ್ಪ ಬಳೀಬೇಡಿ.

ನಾನು ಬಂದಿರೋದು ನಿನ್ನ ಕಲ್ಯಾಣಕ್ಕೆ. ನನ್ನ ಜೊತೆ ಗಂಗಾ ಕಲ್ಯಾಣ ಯೋಜನೆ ನಾನು ತಂದಿದ್ದೀನಿ. ನಿನಗೆ ಬೋರ್‌ವೆಲ್ ಸಾಲ ಕೊಡಿಸ್ತೀನಿ.

ಎಂದು ವಿಶ್ವ ಹೇಳಿದಾಗ ರಾಮಣ್ಣ ಜೋರಾಗಿ ನಕ್ಕ.

ಗೊತ್ತಾಯ್ತು ಬಿಡಿ. ಗಂಗಾ ಕಲ್ಯಾಣ ಯೋಜನೆ! ಕಲ್ಯಾಣ ನಿಮ್ಮದು, ಸಾಲ ನಮ್ಮದು. ಅದ್ಸರಿ ಬೋರ್‌ವೆಲ್‌ನಲ್ಲಿ ಸಿಹಿ ನೀರು ಹಾಕಿಸ್ತೀರೋ, ಉಪ್ಪು ನೀರು ಹಾಕಿಸ್ತೀರೋ? ಅಂದ್ರೆ ನೀವು ನೆಲಕ್ಕೆ ತೂತು ಹೊಡೆದು ಸಿಟಿಗೆ ವಾಪಸ್ ಹೋಗೋವರೆಗೂ ಬೋರ್‌ವೆಲ್‌ನಲ್ಲಿ ನೀರು ಬರ್ತಾ ಇರುತ್ತೆ, ಆಮೇಲೆ ಬುಸುಬುಸು ಅಂತ ಗಾಳಿ ಬರುತ್ತೆ ಅಷ್ಟೇ.

ರಾಮಣ್ಣನ ಮಾತಿಗೆ ವಿಶ್ವ ತಬ್ಬಿಬ್ಬಾದ.

ರಾಮಣ್ಣ ಯಾಕೆ ಯೋಚ್ನೆ ಮಾಡ್ತೀಯ? ಒಳ್ಳೆ ನೀರು ಸಿಗೋ ವ್ಯವಸ್ಥೆ ನಾನು ಮಾಡ್ತೀನಿ. ಅದರಲ್ಲಿ ಭತ್ತ ಬೆಳೀ.

ರಾಮಣ್ಣ ನಕ್ಕು ಭತ್ತಕ್ಕೆ ಎಷ್ಟು ನೀರು ಬೇಕಾಗ್ತದೆ ಗೊತ್ತಾ? ಅನ್ನ ತಿನ್ನೋಕೇ ನಾಲ್ಕು ಲೋಟ ನೀರು ಬೇಕು. ಇನ್ನು ಭತ್ತ ಬೆಳೆಯೋಕೆ?

ಹೋಗ್ಲಿ ಕಬ್ಬು ಬೆಳೀ.

ಅಯ್ಯೋ, ಶುಗರ್ ಫ್ಯಾಕ್ಟರಿಗೇ ಸಕ್ಕರೆ ರೋಗ ಬಡಿದೈತೆ. ಒಂದು ಟನ್ ಕಾಡುಸೌದೆ ಬೆಲೆ ಎಷ್ಟಿದೆ ಗೊತ್ತಾ? ಎರಡು ಸಾವಿರದ ಆರುನೂರು ರೂಪಾಯಿ! ಆದರೆ ಕಬ್ಬು? ಬರೀ ಆರು ನೂರು ರೂಪಾಯಿ! ನಾವು ಕಬ್ಬು ಬೆಳೆಯುವ ಬದಲು ಕಾಡುಸೌದೆ ಬೆಳೆಯೋದೇ ಒಳ್ಳೇದು.

ರಾಮಣ್ಣ, ಹೋಗ್ಲಿ ದೀರ್ಘಾವಧಿ ಸಾಲ ತಗೋ. ತೆಂಗಿನಮರ ಹಾಕು, ಅದರ ಪಾಡಿಗೆ ಅದು ಬೆಳೆಯುತ್ತೆ.

ಎಲ್ಲಿ ಬೆಳೆಯುತ್ತೆ ಸ್ವಾಮಿ? ತೆಂಗಿನಮರಕ್ಕೆ ನುಸಿರೋಗ ಬರೋದಿಲ್ವಾ? ಕಾಯಿಗಳೆಲ್ಲ ತುಪತುಪ ಉದುರೋಕಿಲ್ವಾ? ಎಲೆಗಳೆಲ್ಲ ಕಾಮಾಲೆ ಬಣ್ಣಕ್ಕೆ ತಿರುಗೋಕಿಲ್ಲವಾ?

ತೆಂಗಿನಮರದ ನುಸಿರೋಗಕ್ಕೆ ನಾವು ಔಷಧಿ ಕೊಡ್ತೀವಿ, ಪಂಪ್ ಕೊಡ್ತೀವಿ ಎಂದ ವಿಶ್ವ.

ಪಂಪ್ ನಿಮ್ಮದು ಸರಿ. ಮರ ಹತ್ತಿ ಹೊಡೆಯೋವರ್‍ಯಾರು? ಮರದಿಂದ ಬಿದ್ದು ಮೊಣಕಾಲು ಚಿಪ್ಪು ಕಿತ್ಕೊಂಡು ಬಂದ್ರೆ ಯಾರು ಸಹಾಯಕ್ಕೆ ಆಗ್ತಾರೆ?

ವಿಶ್ವನಿಗೆ ಏನು ಮಾತಾಡಬೇಕೆಂದು ತೋಚುವುದಿಲ್ಲ.

ನೀನು ಏನಾದರೂ ಬೆಳೆ ಬೆಳೀಲೇಬೇಕಪ್ಪ. ಹೋಗ್ಲಿ, ಮೆಕ್ಕೆಜೋಳ ಹಾಕು.

ಮೆಕ್ಕೆಜೋಳಕ್ಕೆ ಚುಕ್ಕೆ ರೋಗ ಬರ್ತದೆ.

ಎರಡು ತಿಂಗಳ ಬೆಳೆ ಟೊಮೆಟೋ ಹಾಕು. ಹೈಬ್ರೀಡ್ ಟೊಮೆಟೋ. ಎನ್ನುತ್ತಾ ವಿಶ್ವ ಕ್ಯಾಟಲಾಗ್ ರಾಮಣ್ಣನ ಮುಂದಿಟ್ಟ.

ಸ್ವಾಮಿ, ಟೊಮೆಟೋ ಬೆಳೆದಿರೋವರು ಬೆಳೇನ ರಸ್ತೆಗೆ ತಂದು ಸುರೀತಿರೋದು ನೋಡಿಲ್ವಾ ನೀವು? ಟೊಮೆಟೋದಲ್ಲಿ ನಮಗೇನೂ ಗಿಟ್ಟೋದಿಲ್ಲ.

ಹೋಗ್ಲಿ, ಈರುಳ್ಳೀನಾದ್ರೂ ಬೆಳೆಯಯ್ಯಾ.

ಈರುಳ್ಳಿ ಬೆಳೆದ್ರೆ ಕಣ್ಣೀರೇ ಗತಿ ಅಂತ ಎಲ್ಲರೂ ಹೇಳ್ತಾರೆ. ಪೇಪರ್‍ನಲ್ಲೆಲ್ಲಾ ಬಂದಯ್ತೆ.

ಏನು ಹೇಳಿದ್ರೂ ಇವನು ಒಪ್ತಾ ಇಲ್ಲವಲ್ಲ ಎಂದು ಯೋಚಿಸಿದ ವಿಶ್ವ

ಹೋಗ್ಲಿ, ಬಿ.ಟಿ. ಹತ್ತಿ ಬೆಳೀ. ಆರಾಮವಾಗಿರುತ್ತೆ.

ಬಿ.ಟಿ. ಹತ್ತೀನ ನಂಬ್ಕೊಂಡ್ರೆ ನಾನು ಡಬ್ಬಲ್ ಸೂಸೈಡ್ ಮಾಡ್ಕೋಬೇಕಾಗುತ್ತೆ.

ಅದ್ಹೇಗಪ್ಪ ಡಬ್ಬಲ್ ಸೂಸೈಡ್ ಸಾಧ್ಯ.?

ಈಗ ಸರ್ಕಾರದವರು ಕೀಟನಾಶಕ ಅಂತ ಕೊಡ್ತಾರೆ. ಅದರಲ್ಲಿ ಪವರ್ ಇರೋದಿಲ್ಲ, ರೈತನಿಗೂ ನಷ್ಟ ಆಗುತ್ತೆ, ವಿಷ ಕುಡೀಬೇಕು. ವಿಷಾನೂ ಕುಡಿದು, ನಮ್ಮ ಸೇಫ್ಟಿಗೆ ನೇಣು ಹಾಕ್ಕೋಬೇಕು. ಆಗ ಎರಡು ಲಕ್ಷ ಕೊಡುತ್ತೆ ಸರ್ಕಾರ.

ಈಗೇನು ಮಾಡ್ಬೇಕೂಂತಿದ್ದೀರ ನೀವು?

ನೀವು ಯಾವತ್ತಾದರೂ ಹಂದಿ ಸಾಕಿದ್ದೀರಾ?

ರಾಮಣ್ಣನ ಮಾತಿಗೆ ವಿಶ್ವನಿಗೆ ಗಾಬರಿಯಾಯಿತು.

ಇಲ್ಲಪ್ಪ, ನಾನು ಸಂಸಾರಸ್ಥ.

ಹೆಂಡ್ತೀನ ಸಾಕಿದ್ರೆ ಸಾಕಾ? ಜೊತೆಗೆ ಹಂದೀನೂ ಸಾಕಬೇಕು. ಹಂದಿ ನಮ್ಮ ಹಂಗಲ್ಲ, ಒಂದು ಸಲಕ್ಕೆ ಹತ್ತರಿಂದ ಹದಿನೈದು ಮರಿ ಹಾಕುತ್ತೆ ಗೊತ್ತಾ? ಎರಡು ಸಾವಿರ ಕೊಟ್ಟು ಒಂದು ಹಂದಿ ತನ್ನಿ. ವರ್ಷದಲ್ಲಿ ಒಂದು ಲಕ್ಷ ಲಾಭ. ಹತ್ತು ವರ್ಷದಲ್ಲಿ ಬಂಗ್ಲೆ ಕಟ್ಟಿ ಇನ್ನೊಂದು ಮದುವೆ ಮಾಡ್ಕೋತೀರ.

ಅದ್ಹೇಗೆ?

ನೋಡಿ ಸ್ವಾಮಿ, ನಿಮ್ಮ ಮನೇಲಿ ಹಂದಿ ಸಾಕೋಕೆ ಶುರು ಮಾಡಿ. ನಿಮ್ಮ ಬೆಡ್‌ರೂಮ್‌ಗೂ ಹಂದೀನ ಬಿಟ್ಕೊಳ್ಳಿ. ಇಡೀ ಮನೇನ ಹಂದಿಗೆ ಅಂತ ಇಟ್ಕೊಳ್ಳಿ. ನೀವು ಕೊಟ್ಟಿಗೇಲಿ ಮಲಗಿ. ಎಲ್ಲಾ ಕಡೆ ಹಂದಿ. ಮರಿಗಳ್ನ ಮಾರಲೇಬೇಡಿ. ಎರಡು ಹಂದಿ ಹದಿನೈದು ಆಗುತ್ತೆ, ಹದಿನೈದು ಹಂದಿ ಐವತ್ತು ಆಗುತ್ತೆ, ಹದಿನೈದು ಹಂದಿ ನೂರೈವತ್ತು ಆಗುತ್ತೆ.


ವಿಶ್ವನಿಗೆ ಜ್ಞಾನೋದಯ ಆಯ್ತು.

ಹಾಗಿದ್ರೆ ನಾನು ಈ ಗ್ರಾಮೀಣಾಭಿವೃದ್ಧಿ ಕೆಲಸ ಬಿಟ್ಟು ಒಂದು ಜೊತೆ ಹಂದಿ ಮೇಯಿಸೋಕೆ ತಗೊಂಡ್ಹೋಗ್ತೀನಿ.

ಹಂದೀನ ಮೇಯಿಸೋಷ್ಟಿಲ್ಲ. ರಸ್ತೆ ಪಕ್ಕ ಇರೋದನ್ನ ಅದೇ ಮೇಯುತ್ತೆ. ಅದರ ಪಾಡಿಗೆ ಅದು ಮರಿಗಳ್ನ ಹಾಕುತ್ತೆ. ಹಂದಿಗೆ ನಿಮ್ಮ ಸಹಾಯ ಬೇಕಾಗೋಲ್ಲ.

ಎಂದಾಗ ವಿಶ್ವ ಹಂದಿಗಳ ಮಧ್ಯೆ ಇದ್ದಂತೆ ಕನಸು ಕಂಡ.

❖



ಕಾಫೀ ಹೌಸ್

ಬಿರುಗಾಳಿ ಬೀಸೋದು ಕಂಡಿದ್ದೀವಿ. ಚಂಡ ಮಾರುತ ಬೀಸುತ್ತೆ ಆಗ ಮರ ಉರುಳುತ್ತೆ, ನದಿ ಉಕ್ಕಿ ಹರಿಯುತ್ತೆ, ಜನ ದಿಕ್ಕಾಪಾಲಾಗುತ್ತಾರೆ. ಅನೇಕರು ಪಾಪ ಸತ್ತೇ ಹೋಗುತ್ತಾರೆ. ಈಗಲೂ ಅಂಥಾ ಒಂದು ಬಿರುಗಾಳಿ ಬೀಸಿದೆ. ಷೇರು ಮಾರುಕಟ್ಟೆಯ ಚಂಡಮಾರುತ, ಹಣಕಾಸಿನ ಚಂಡಮಾರುತ. ಇದಕ್ಕೆಲ್ಲ ಪ್ರಪಂಚದ ದೊಡ್ಡಣ್ಣನೇ ಕಾರಣ ಅಂತ ಎಲ್ಲರೂ ಹೇಳುತ್ತಿದ್ದಾರೆ. ಅಮೆರಿಕಕ್ಕೆ ಸೀನು ಬಂದರೆ ಇನ್ನೆಲ್ಲೋ ಪ್ರವಾಹ ಉಕ್ಕಿ ಹರಿಯುತ್ತದೆ ಅನ್ನೋ ಮಾತೂ ಇತ್ತು. ವಿಷಯ ಏನಪ್ಪಾ ಅಂದರೆ ಪ್ರಪಂಚದ ಆರ್ಥಿಕ ಪರಿಸ್ಥಿತಿಯೇ ಏರುಪೇರಾಗಿದೆ. ಒಬಾಮಾ ಬರ್‍ತಾನೇ ಅಂದರೆ ಈ ಪಾಟಿ ಏರುಪೇರಾದರೆ ಇನ್ನು ಜನವರಿ 20ರ ನಂತರ ಏನಪ್ಪಾ ಅಂತ ಎಲ್ಲ ಷೇರುದಾರರೂ ದಿಗಿಲಾಗಿದ್ದಾರೆ. ಬೆಂಗಳೂರಿನ ಗಲ್ಲಿಗಲ್ಲಿಗಳಲ್ಲಿ ಕೇಳಿಬರುತ್ತಿರುವ ಮಾತು ಏನಪ್ಪಾ ಅಂದರೆ ಹೇಗಾದರೂ ನಮ್ಮ ತರಕಾರಿ ಬೆಲೆ, ದಿನಸಿ ಬೆಲೆ ಕಡಿಮೆಯಾದರೆ ಸಾಕು ಅಂತ. ಪೆಟ್ರೋಲ್ ಬ್ಯಾರಲ್‌ಗೆ 147 ಡಾಲರ್ ಇದ್ದಾಗಲೂ ಅದೇ ರೇಟು ಈಗ 57 ಡಾಲರ್ ಆದಾಗಲೂ ಅದೇ ರೇಟೇ ಅಂತ ಜನಸಾಮಾನ್ಯ ದಿನಾ ಸರಕಾರಕ್ಕೆ ಹಿಡಿಶಾಪ ಹಾಕುತ್ತಿದ್ದಾನೆ. ಬದಲಾವಣೆ ಬೇಕು ನಿಜ ಆದರೆ ಈಪಾಟಿ ಬದಲಾವಣೆಯೇ ಅಂತ ಕೆಲವರು ಹುಬ್ಬೇರಿಸಿದ್ದಂತೂ ನಿಜ. ಇದರ ಜೊತೆಗೆ ಒಬಾಮಾ ಒಸಾಮಾ ಜಗಳವಂತೂ ಇರುತ್ತೆ. ಯಾರು ಮೇಲು (ಇಬ್ಬರೂ Male ಅನ್ನೋದು ನಿಜವಾದರೂ) ಅನ್ನೋದಂತೂ ಈಗ ಕುತೂಹಲಕರವಾಗಿ ಉಳಿಯಬಹುದು.

- ಬೇಲೂರು ರಾಮಮೂರ್ತಿ

ಕೇವಲ 40 ವರ್ಷಗಳ ಹಿಂದೆ ಆ ದೇಶದಲ್ಲಿ ಕರಿಯನೊಬ್ಬ ಬಿಳಿಯವನ ಪಕ್ಕದಲ್ಲಿ ಬಸ್ಸಿನಲ್ಲಿ ಆರಾಮವಾಗಿ ಕೂಡಲು ಸಹ ಹಿಂಜರಿಯುತ್ತಿದ್ದ. ಆರು ತಿಂಗಳ ಹಿಂದೆ ನಮ್ಮ ಆಲ್ ನೋಯಿಂಗ್ ಆಸ್ಟ್ರಾಲಜರ್ಸ್ ಸೇರಿದಂತೆ ವಿಶ್ವದಲ್ಲಿ ಯಾರೂ ಸಹ ಕರಿಯನೊಬ್ಬ ಆ ದೇಶದ ಅಧ್ಯಕ್ಷನಾಗುತ್ತಾನೆಂದು ಕನಸು ಸಹ ಕಂಡಿರಲಿಲ್ಲ. ಆದರೆ ಬರಾಕ ಹುಸೇನ್ ಒಬಾಮ ಶ್ವೇತಭವನಕ್ಕೆ ಬರಾಕಿಲ್ಲ ಎಂದುಕೊಂಡವರ ಮಾತು ಹುಸಿಯಾಗಿದೆ. ಬಟ್ ಒಬಾಮ ಗೆದ್ದಿರುವ ಸಮಯ ಮಾತ್ರ ಸರಿಯಾಗಿಲ್ಲ. ಬರ, ವಿದ್ಯುತ್ ಅಭಾವ, ವೀರಪ್ಪನ್ ಹಾವಳಿ ಸಮಯಲ್ಲಿ ನಮ್ಮ ಎಸ್.ಎಂ. ಕೃಷ್ಣ ಮು.ಮ. ಆಗಿ ಸಮಸ್ಯೆಗಳ ಸರಮಾಲೆಯನ್ನೇ ಎದುರಿಸಿದಂತೆ ಬ.ಹು.ಒ. ಶ್ವೇತಭವನದಲ್ಲಿ ಆರಾಮವಾಗಿ ಕಾಲ ಕಳೆಯಲು ಸಾಧ್ಯವಿಲ್ಲ. ಬೈ ದಿ ವೆ ಇಂತಹ ಸಮಸ್ಯೆಗಳಿದ್ದುದರಿಂದಲೇ ಅಮೆರಿಕನ್ನರು ಒಬಾಮರನ್ನು ಆಯ್ಕೆ ಮಾಡಿರಬಹುದೆ? ಹೊಸಬನನ್ನು ತಂದು ಕೂರಿಸಿದರೆ ಹೊಸ ಪರಿಹಾರಗಳನ್ನು ಹುಡುಕಬಹುದು ಎಂದು ಮತದಾರರು ಭಾವಿಸಿ ಶ್ವೇತಭವನದಲ್ಲಿ ಕಪ್ಪು ದೊರೆಯನ್ನು ಪ್ರತಿಷ್ಠಾಪಿಸಿರಬಹುದು. ಪೂರ್ ಚಾಪ್, ಒಬಾಮ ಆರ್ಥಿಕ ಸಮಸ್ಯೆಗೆ ಪರಿಹಾರ ರೂಪಿಸಬೇಕು, ಕೆಲಸ ಕಳೆದುಕೊಂಡಿರುವ ಮಂದಿಗೆ ಕೆಲಸ ಮರಳಿ ಕೊಡಿಸಬೇಕು, ಇರಾಕಿನ ಯುದ್ಧವೆಂಬ ಚಕ್ರವ್ಯೂಹದಿಂದ ಹೊರಬರಬೇಕು, ಅಧೋಗತಿಗೆ ಇಳಿದಿರುವ ದೇಶದ

ವರ್ಕರ್ಸ್‌ನ್ನಿಗೆ ಒಂಬಿಷ್ಟು ವೈಟ್‌ವಾಶ್ ಮಾಡಬೇಕು. ಅದಕ್ಕಿಂತಲೂ ಹೆಚ್ಚಾಗಿ ಅಧ್ಯಕ್ಷ ಪದವಿಗೆ ಬುಶ್ ಮಹಾಶಯರಿಂದ ಆಗಿರುವ ಡ್ಯಾಮೇಜ್ ಸರಿಪಡಿಸಬೇಕು...... ಆದುದರಿಂದಲೇ ಪಾಪ! ಒಬಾಮ ಪ್ರಮಾಣ ವಚನ ಸ್ವೀಕರಿಸಿದ ಮೇಲೆ ಹುರುಸಿಕೊಳ್ಳೋದಕ್ಕೂ ಸಮಯ ಇರೋದಿಲ್ಲ. ಆದರೆ ಒಂದೆ ಸಮಾಧಾನ ಎಂದರೆ ಅವರು ಶೋಭಾ, ಜಗ್ಗೇಶ್, ರೇವಣ್ಣ ಉಗ್ರಪ್ಪ, ಚನ್ನಿಗಪ್ಪ, ಪಟ್ಟಾಭಿಷೇಕದ ಸಮಾವೇಶ, ಹವನ ಹೋಮ, ಟ್ರಾಫಿಕ್ ಜಾಮ್ ಮುಂತಾದ ಸಮಸ್ಯೆಗಳ ಬಗ್ಗೆ ತಲೆಕೆಡಿಸಿಕೊಳ್ಳಬೇಕಿಲ್ಲ. ಆಲ್ ದಿ ಬೆಸ್ಟ್ ಕಪ್ಪು ಬಿಳುಪು ಅಧ್ಯಕ್ಷರೆ. ಲವಲವಿಕೆಯ ಪ್ರತೀಕದಂತಿರುವ, ಯುವ ನೇತಾರನಾದ ನಿಮ್ಮನ್ನು ಜಗವೇ ನೋಡುತಿದೆ. ಆದರೆ ವಿ ಮಿಸ್ ಬುಷ್ ಅಂಡ್ ಬುಷೋಕ್ತಿ......

ಪಿ ಎಸ್: ಒಸಾಮನನ್ನು ಒಬಾಮ ಹೇಗೆ ಟ್ಯಾಕಲ್ ಮಾಡ್ತಾರೋ? ಪಾರ್ಕಲಾಂ!

- ಆನಂದ

ಒಬಾಮಾ ಅಮೆರಿಕದ ಉನ್ನತ ಸ್ಥಾನಕ್ಕೆ ಬಂದದ್ದೇನೋ ಸರಿ, ಆದ್ರೆ ಇಂದ್ಗೂ ಮೊದಲ್ನೇ ಕರಿಯ, ಮೊದಲ್ನೇ ಕರಿಯಾಂತ್ಲೇ ಎಲ್ಲಾ ಪತ್ರಿಕೆಗ್ಳು ಗೀಚೋದು ಸರ್‍ಯೇ? ವರ್ಣಾತೀತಾಂತ ಹೇಳ್ಕೊಳ್ತಾನೇ ವರ್ಣದ್ಬಗ್ಗೆ ಉಲ್ಲೇಖ್ಸೋದು ತಪ್ಪಲ್ವೇ? ಒಬಾಮಾ ತನ್ಯೋಗ್ಯತೆಯ ಮೇಲಾರಿಸ್ಬಂದ್ನೇವಿನಹ ಕರಿಯಾನ್ನೋ ಒಂದೇ ಕಾರಣಕ್ಕೇನೂ ಆರಿಸ್ಬಂದಿಲ್ವಲ್ಲ! ಆತನ ಗುಣಾವಗುಣಗಳ್ಬಟ್ಟೀನ ಮುಂದ್ಮಾಡೋದ್ಬಿಟ್ಟು ಹೊರ್ತು ಕರಿಯ ಗೆದ್ದ ಅನ್ನೋದು ಪತ್ರಿಕೆಗಳವ್ಕೀಳ್ಮಟ್ಟವನ್ನ ತೋರಿಸ್ತಷ್ಟೆ. ಒಬಾಮಾ ಗೆದ್ದದ್ದಕ್ಕೆ ಖುಷಿ ಪಡ್ತಿರೋ ನಮ್ಜನ ಇಲ್ಲೂ ಹಾಗೇ ಆಗಿರೋದನ್ನ ಆದಾಗ ಎತ್ತಾಡಿಲ್ಲ! ನಾರಾಯಣನ್ ರಾಷ್ಟ್ರಪತಿ ಭವನ ಸೇರ್‍ದ್ದಾಗಾಗ್ಲೀ, ಯಾವ್ದೋ ದೊಡ್ಡಪಕ್ಷದ್ಮುಖಂಡ್ನಾಗಿದ್ದಾಗ್ಲೀ ಖಂಡಂ ಮಾಡೋ ನಾವು ಒಬಾಮಾಗೆ ಬ್ಲೇಷ್ ಅಂತಿದ್ದೇವೆ. ನಮ್ಮಮ್ಜನರ್‍ಯೋಗ್ಯತೇನಳಿಯೋದ್ಬಿಟ್ಟು ಪಕ್ಕದ್ಮನೆ ಕಡೇ ನೋಡ್ತಾ ಚಪ್ಪಾಳೆ ತಟ್ಟೋದನ್ನಾವ್ಕಡ್ಮೆ ಮಾಡ್ಬೇಕು. ಒಬಾಮಾ ಗೆದ್ದ್ರೂ ಅಮೆರಿಕ ಸ್ವಾರ್ಥಿಗಳ್ರಾಷ್ಟ್ರಾನ್ನೋದನ್ನ ನಾವ್ಮರೀಬಾರ್ದು. ಮೇಲಿನ್ನಿಟಲ್ಯಾರಿದ್ರೂನೂ ಕೆಳಗಿನ್ಜನ ಒಪ್ದೇಹೋದ್ರೆ ನಮ್ಗ್ಯಾಗೋ ಲಾಭ ಅಷ್ಟಕ್ಕಷ್ಟೆ


- ಎನ್. ರಾಮನಾಥ್

ಅಮೇರಿಕೆಯ ಅಧ್ಯಕ್ಷರಾಗಿ ಒಬಾಮಾ ಆಯ್ಕೆಯಾಗಿರುವ ಸುದ್ದಿ ಇಡೀ ಪ್ರಪಂಚದಲ್ಲಿ ದೊಡ್ಡ ಸುದ್ದಿಯಾಗಿ ಮಾಧ್ಯಮಗಳಿಂದ ಬಿಂಬಿತವಾಗುತ್ತಿದೆ. ನಮ್ಮ ಅರಿವಿಲ್ಲದೆಯೇ ಅಥವಾ ಅರಿವಿದ್ದೂ ನಾವೆಲ್ಲರೂ ಒಂದು ರೀತಿಯಲ್ಲಿ ಅಮೇರಿಕದ ಪರವಾಗಿ ಕಾರ್ಯ ನಿರ್ವಹಣೆ ಮಾಡುತ್ತಿರುವವರೇ. ಸಹಜವಾಗಿಯೇ ಈ ಸುದ್ದಿ ದೊಡ್ಡದಾಯಿತು ಮತ್ತು ಒಬಾಮಾರನ್ನು ಹೊಸ ಯುಗದ ಪ್ರವರ್ತಕ ಎಂಬಂತೆ ಚಿತ್ರಿಸಲಾಗುತ್ತಿದೆ. ಮೊಟ್ಟ ಮೊದಲ ಕಪ್ಪು ಜನಾಂಗದ ಅಧ್ಯಕ್ಷ ಎಂದು, ನೂತನ ಕನಸುಗಳನ್ನು ನನಸು ಮಾಡಬಲ್ಲಾತನೆಂದೂ ಈತ ಪ್ರೊಜೆಕ್ಟ್ ಆಗುತ್ತಿರುವಂತೆಯೇ. ನನ್ನಂತಹವರಿಗೆ ಒಂದು ಥರಹಾ ಭಯ ಶುರುವಾಗಿಬಿಡುತ್ತೆ. ಅಮೇರಿಕೆಯವರ ಹುನ್ನಾರಗಳನ್ನು ಅವರು ನಮಗೆ ಏಕಪಕ್ಷೀಯವಾಗಿ ಹೇರುವ ನಿರ್ಬಂಧದಿಂದ ಕಳೆದ ದಶಕದಲ್ಲಿ ನಮ್ಮ ಉದ್ದಿಮೆಗಳು ಪಟ್ಟ ಪಾಡು ಅಷ್ಟಿಷ್ಟಲ್ಲ. ದೇಶದ

ಉತ್ಪಾದನೆ ಸ್ಟಾಂಡ್ ಸ್ಟಿಲ್ ಆಗಿತ್ತು, ನಮ್ಮ ಹುಡುಗರಿಗೆ ಉದ್ಯೋಗ ದೂರಾಗಿತ್ತು ಹಾಗೂ ನಮ್ಮ ನೆರೆಯರ ಬಳಿ ನಿತ್ಯ ನಿರಂತರ ಕದನ ನಡೆಯುವಂತೆ ಅಮೇರಿಕಾ ನಿರ್ಣಯಿಸಿ ನಮಗೂ ಅವರ ಯುದ್ಧ ಉಪಕರಣಗಳನ್ನೂ ನೆರೆ ರಾಷ್ಟ್ರಕ್ಕೂ ಅದೇ ಉಪಕರಣಗಳನ್ನೂ ಮಾರಿ ತನ್ನ ಬೊಕ್ಕಸ ತುಂಬಿಕೊಂಡಿತಲ್ಲದೇ ತನ್ನ ಹೊಸಾ ಪ್ರಯೋಗಗಳಿಗೆ ನಮ್ಮ ದೇಶವನ್ನು ಪ್ರಯೋಗ ಕ್ಷೇತ್ರವನ್ನಾಗಿಸಿಕೊಂಡಿತ್ತು.

ಈಚೆಗೆ ಭಾರತೀಯ ಐಟಿ ಬಿಟಿ ತಜ್ಞರನ್ನು ಅಮೇರಿಕಾ ತೆರೆದ ತೋಳಿನಿಂದ ಬಾಚಿ ತಬ್ಬಿದರೂ ಕಳೆದ ತಿಂಗಳಲ್ಲಿ ಆದ ಆರ್ಥಿಕ ಕುಸಿತದಿಂದ ನಮ್ಮ ಹುಡುಗರು ಅಮೇರಿಕದ ಕನಸು ಕಾಣುವುದನ್ನು ಕೊಂಚ ದಿನ ನಿಲ್ಲಿಸಬೇಕಿದೆ. ಇದು ಹೋಗಲಿ ಎಂದರೆ ಹೊರಗುತ್ತಿಗೆ ನಿಲ್ಲಿಸುವುದಾಗಿ ಒಬಾಮಾ ಈಗಾಗಲೇ ಹೇಳಿದ್ದಾನೆ! ಅಂದರೆ ನಮ್ಮ ಬಿಪಿಓ ಮಕ್ಕಳ ಪಾಡೇನು? ಡಿಗ್ರೀ ಮುಗಿಸಿದ ಕೂಡಲೇ 20-25 ಸಾವಿರ ಪಗಾರ ಪಡೆಯುತ್ತಿದ್ದ ಹುಡುಗರು ಬೀದಿಗೆ ಬಂದರೆ ಅದನ್ನು ಹೊರುವ ಶಕ್ತಿ ನಮ್ಮ ಸಮಾಜಕ್ಕೆ ಇದೆಯೇ? ಈ ತೆರನಾದ ಪ್ರಶ್ನೆಗಳು ನನ್ನನ್ನು ಒಬಾಮಾ ಆಯ್ಕೆಯಾದ ದಿವಸದಿಂದಲೂ ಕಾಡಿವೆ ! ಆದರೂ ಒಂದು ಬೆಳ್ಳಿ ಗೆರೆ ಏನು ಗೊತ್ತಾ? ಎಂಥೆಂಥಹದೋ ಇನ್ನೂ ಕ್ಲಿಷ್ಟವಾದ ಸಮಸ್ಯೆಗಳನ್ನು ನಮ್ಮ ದೇಶ ಪರಿಪರಿಸಿಕೊಂಡಿದೆ: ಅವುಗಳ ಮುಂದೆ ಇದು ಸಮಸ್ಯೆಯೇ ಆಗಬಾರದು ...! ಒಟ್ಟಿನಲ್ಲಿ ಈ ಸಧ್ಯಕ್ಕೆ ಒಬಾಮಾ ಆಲ್ ದಿ ಬೆಸ್ಟ್ ಟು ಯೂ.... !

- ಎಚ್. ಗೋಪಾಲಕೃಷ್ಣ



ಇಂಟರ್‌ನೆಟ್ ಕೃಪೆ

ವಿದ್ಯಮಾನಗಳು

- ಕು.ಕ.

ಪ್ರೆಸಿಡೆಂಷಿಯಲ್ ಕ್ಯಾಂಡಿಡೇಟ್ ಬರಾಕ್ ಒಬಾಮ ಈಗ ಪ್ರೆಸಿಡೆಂಟ್- ಎಲೆಕ್ಟ್. ಅವರು ದಿ ಅಮೆರಿಕನ್ ಪ್ರೆಸಿಡೆಂಟ್ ಆಗಲು ಇನ್ನೂ ಜನವರಿ ಬರಬೇಕು. ಆದರೆ ಒಬಾಮ ಪರವಾಗಿ ಓಟುಕೊಟ್ಟು ಅಮೆರಿಕಾ ನಿಜವಾಗಿಯೂ melting pot ಎಲ್ಲಾ ಅರ್ಹರಿಗೆ ಎಲ್ಲಾ ಅವಕಾಶಗಳು ಸದಾ ತೆರೆದಿರುವ ರಾಷ್ಟ್ರ ಎನ್ನುವುದನ್ನು ಮತ್ತೊಮ್ಮೆ ಪ್ರದರ್ಶಿಸಿದ ಅಮೆರಿಕಾದ ನಾಗರಿಕರನ್ನು ನಾವು ಹೃತ್ಪೂರ್ವಕವಾಗಿ ಅಭಿನಂದಿಸಲೇಬೇಕು. ಬಾರ್ಟ್‌ಲೆಟ್ ಎಫೆಕ್ಟ್ ಬಗ್ಗೆ ಮಾತನಾಡಿದ, ಒಬಾಮಾ ರಾಷ್ಟ್ರಾಧ್ಯಕ್ಷರಾಗಲು ಏಕೆ ಸಾಧ್ಯವಿಲ್ಲ ಎನ್ನುವಂತಹ ಬೃಹದ್ ಗ್ರಂಥಗಳನ್ನು ಬರೆದ ಮಹಾ ವಿದ್ವಾಂಸರುಗಳು ಒಬಾಮ ಗೆದ್ದಿದ್ದಕ್ಕೆ ಈಗ ಕೈಕೈ ಹಿಸುಕಿಕೊಳ್ಳುತ್ತಿದ್ದಾರಂತೆ. ಇದೇನೆ ಇರಲಿ ಈಗ ಬೇರೆ ದೇಶಗಳಲ್ಲೂ ಅಲ್ಲಿಯ ಒಬಾಮಾಗಳು ನಾಯಕರುಗಳಾಗುವುದು ಸಾಧ್ಯವೇ ಎನ್ನುವ ವಿಷಯದ ಬಿಸಿಬಿಸಿ ಚರ್ಚೆ ನಡೆಯುತ್ತಿದೆ. ಬ್ರಿಟನ್ ಅಥವ ಇತರ ಯೂರೋಪಿಯನ್ ದೇಶಗಳಲ್ಲಿ ಒಬಾಮಾಗಳು ಬರಲು ಸಾಧ್ಯವೇ ಇಲ್ಲ ಎನ್ನುವುದರಲ್ಲಿ ಸರ್ವಸಮ್ಮತಿಯಿರುವಂತೆ ಕಾಣುತ್ತದೆ. ಭಾರತದಲ್ಲಿ? ದೇವೇಗೌಡರಂತಹ ದೇವೇಗೌಡರೇ ನಮ್ಮ ಪ್ರಧಾನಿಯಾದ ಮೇಲೆ ಇನ್ನು ಯಾರು ಬಂದರೂ ಯಾರೂ ಆಶ್ಚರ್ಯ ಪಡುವಹಾಗಿಲ್ಲ ಎನ್ನುವುದು ಬಹಳ ಜನರಿಂದ ಬರುವ ಸಿನಿಕಲ್ ಉತ್ತರ. ಇಂತಹ ಒಂದು ಉತ್ತರ ಕೇಳಿದ ಹಿರಿಯರೊಬ್ಬರು ಅಯ್ಯೋ ಅಯ್ಯೋ ಆ ಒ. ಎಲ್ಲಿ? ಈ ದೇ. ಎಲ್ಲಿ? ಶಾಂತಂ ಪಾಪಂ ಶಾಂತಂ ಪಾಪಂ ಎಂದು ಹೇಳುತ್ತಾ ಎರಡೂ ಕೈಗಳಿಂದ ಎರಡೂ ಕಿವಿಗಳನ್ನೂ ಮುಚ್ಚಿಕೊಂಡರಂತೆ.

★★★

ಕೇವಲ ಕೆಲವೇ ತಿಂಗಳುಗಳ ಹಿಂದೆ ಇಪ್ಪತ್ತು ಸಾವಿರದ ಗಡಿದಾಟಲು ಸಿದ್ಧವಾಗಿದ್ದ ಸೆನ್‌ಸೆಕ್ಸ್ ಈಗ ಒಂಬತ್ತು ಸಾವಿರದ ಸುತ್ತಮುತ್ತ ತೊಳಲಾಡುತ್ತಿದೆ. ಜನವರಿಯಲ್ಲಿ 39 ರೂಪಾಯಿಗಳಿಗೆ ಸಿಗುತ್ತಿದ್ದ ಒಂದು ಡಾಲರ್ ಕೊಳ್ಳಲು ಈಗ, ನವಂಬರಿನಲ್ಲಿ ಐವತ್ತು ರೂಪಾಯಿ ಕೊಡಬೇಕಾಗಿದೆ. ಕ್ಯಾಂಪಸ್ ಇಂಟರ್‌ವ್ಯೂಗಳಲ್ಲಿ ಜಾಣ ಹುಡುಗರಿಗೆ ನಿಮಗೆ ಇಷ್ಟು ಸಂಬಳದ ಕೆಲಸ ಕೊಡುತ್ತೇವೆ ಎಂದು ಭರವಸೆ ಕೊಟ್ಟಿದ್ದ ಕಂಪೆನಿಗಳು ಅದನ್ನೆಲ್ಲಾ ಈಗ ಮರೆತುಬಿಡಿ ಎಂದು ಹೇಳುತ್ತಿವೆಯಂತೆ. ಹೋದ ವರ್ಷ ಇಂಜನೀರಿಂಗ್ ಪದವಿ ಪರೀಕ್ಷೆಯನ್ನು ಮೊದಲ ದರ್ಜೆಯಲ್ಲಿ ಪಾಸ್ ಮಾಡಿರುವವರು ಇನ್ನೂ ನಿರುದ್ಯೋಗಿಗಳಾಗಿಯೇ ಕುಳಿತಿದ್ದಾರಂತೆ. ಆದರೂ ಉನ್ನತ ಹುದ್ದೆಗಳಲ್ಲಿರುವ ನಮ್ಮ ಮಮೋಸಿಂ, ಪಚಿ, ಮೋಸಿಂಅ ಮೊದಲಾದ ರಾಜಕಾರಣಿ/ಆರ್ಥಿಕ ತಜ್ಞರು ನಮ್ಮ ಫಂಡಮೆಂಟಲ್‌ಗಳೆಲ್ಲಾ ಸರಿಯಾಗೇ ಇವೆ. ಈ ವರ್ಷ ಮುಂದುವರಿದ ದೇಶಗಳ ಗ್ರೋತ್ ರೇಟ್ ಒಂದೋ ಎರಡೋ ಪರ್ಸೆಂಟ್ ಇದ್ದರೆ ನಮ್ಮದೇಶದ ಗ್ರೋತ್ ರೇಟ್ ಏಳು-ಎಂಟು ಪರ್ಸೆಂಟ್ ಮೀರುತ್ತೆ ಎಂದು ಸಮಾಧಾನ ಹೇಳುತ್ತಿದ್ದಾರೆ. ಸಿಕ್ಕೇ ಬಿಟ್ಟಿದ್ದ ಕೆಲಸ ತಪ್ಪಿಸಿಕೊಂಡವರು, ಇದ್ದ ಕೆಲಸ ಕಳೆದುಕೊಂಡವರು, ಸ್ಟಾಕ್ ಎಕ್ಸ್‌ಚೇಂಜಿನಲ್ಲಿ ರಾತ್ರೋರಾತ್ರಿ ಲಕ್ಷಾಂತರ ರೂಪಾಯಿಗಳ ನಷ್ಟಮಾಡಿಕೊಂಡವರು ಸ್ವಾಮಿ ನಿಮ್ಮ ಗ್ರೋತ್ ರೇಟ್ ನಿಮ್ಮ

ಷೋಕೇಸಿನಲ್ಲಿಟ್ಟುಕೊಂಡು ಖುಷಿ ಪಡಿ, ನಮ್ಮ ಗತಿ ಏನು ಅಷ್ಟು ಹೇಳಿ ಎಂದು ಕೇಳಬಯಸುತ್ತಿದ್ದಾರೆ. ಆದರೆ ಇವರಿಗೆ ಉತ್ತರ ಕೊಡಲು ಈ ಬ್ಯುಸಿ ನಾಯಕರುಗಳಿಗೆ ಪುರಸೊತ್ತಿಲ್ಲ.

★★★

ಕುಂಬ್ಳೆ-ಧೋನಿ ನೇತೃತ್ವದ ಭಾರತದ ಕ್ರಿಕೆಟ್ ತಂಡ ಪಾಂಟಿಂಗ್ ನಾಯಕತ್ವದ ಆಸ್ಟ್ರೇಲಿಯಾ ಕ್ರಿಕೆಟ್ ತಂಡವನ್ನು 2-0 ಟೆಸ್ಟುಗಳಿಂದ ಸೋಲಿಸಿದೆ. ಗಂಭೀರ್, ಸೆಹ್ವಾಗ್, ಸಚಿನ್, ಸೌರವ್, ಲಕ್ಷ್ಮಣ್ ಸೆಂಚುರಿ ಡಬಲ್ ಸೆಂಚುರಿಗಳನ್ನು ಹೊಡೆದಿದ್ದಾರೆ. ಜಹೀರ್, ಇಶಾಂತ್, ಹರ್‌ಭಜನ್ ಉತ್ತಮವಾಗಿ ಬೌಲಿಂಗ್ ಮಾಡಿದ್ದಾರೆ. ಬ್ಯಾಟಿಂಗ್ ಬೌಲಿಂಗ್ ಫೀಲ್ಡಿಂಗ್ ಎಲ್ಲಾ ಕ್ಷೇತ್ರಗಳಲ್ಲೂ ಭಾರತ ಆಸ್ಟ್ರೇಲಿಯಾವನ್ನು ಮೀರಿಸಿದೆ. ಪಾಪ ಆಸ್ಟ್ರೇಲಿಯಾಕ್ಕೆ ಸೋತ ಅಭ್ಯಾಸವಿಲ್ಲ. ನಮಗಿಂತ ಅವರು ಉತ್ತಮವಾಗಿ ಆಡಿದರು. ಅದರಿಂದ ಅವರು ಗೆದ್ದರು ಎಂದು ಒಪ್ಪಿ ಕೊಳ್ಳುವ ಕ್ರೀಡಾ ಮನೋಭಾವವಿಲ್ಲ. ಭಾರತದ ಸ್ಟೇಡಿಯಂಗಳು ಸರಿಯಿಲ್ಲ, ಅಲ್ಲಿಗೆ ಬಂದಿದ್ದ ಪ್ರೇಕ್ಷಕರು ಸರಿಯಿಲ್ಲ, ನಾವಿದ್ದ ಹೋಟಲ್‌ಗಳು ಸರಿಯಿರಲಿಲ್ಲ, ಅಲ್ಲಿ ಕೊಟ್ಟ ಆಹಾರ ಸರಿಯಿರಲಿಲ್ಲ ಎಂದು ಸೋಲಿಗೆ ನೂರು ನೆಪಗಳನ್ನು ಕ್ಯಾಪ್ಟನ್ ಸಾಹೇಬರು ಸೃಷ್ಟಿಸುತ್ತಿದ್ದಾರೆ. ಕುಣಿಯಲಾರದ ಯಾವಳೋ ನೆಲ ಡೊಂಕು ಎಂದಳೆಂದು ನಮ್ಮ ಗಾದೆಯೇ ಇದೆಯಲ್ಲ.

★★★

ಒಟ್ಟು ಒಂದು ಸಾವಿರದ ಇನ್ನೂರು ಬಾಣಸಿಗರು ತಲಾ ನೂರು ಕೆಜಿಗಳ ಇನ್ನೂರೈವತ್ತು ಮೂಟೆ ಸ್ಪೆಷಲ್ ಸೋನಾಮಸೂರಿ ಅಕ್ಕಿ, ನಲ್ವತ್ತು ಸಾವಿರ ಕಟ್ಟು ಮೆಂತ್ಯೆ ಸೊಪ್ಪು, ಎರಡು ಸಾವಿರ ಕೆಜಿ ಈರುಳ್ಳಿ, ಎಂಟು ನೂರು ಕೆಜಿ ಕ್ಯಾರೆಟ್, ಸಾವಿರದ ಮುನ್ನೂರು ಕೆಜಿ ಹುರಳಿಕಾಯಿ, ಆರು ಸಾವಿರ ತೆಂಗಿನಕಾಯಿ ಹಾಕಿ ಮಾಡಿದ ಮೆಂತ್ಯೆ ಸೊಪ್ಪಿನ ಭಾತನ್ನು ಮೊಸರುಬಜ್ಜಿಯೊಂದಿಗೆ ಒಂದೂವರೆ ಲಕ್ಷ ಮಂದಿಗೆ ಹಂಚಲಾಯಿತಂತೆ. ಸಂದರ್ಭ ದೇವೇಗೌಡರ ಪ್ರೀತಿಯ ಮಗನ ಪಟ್ಟಾಭಿಷೇಕ ಸಮಾರಂಭ ಎನ್ನುವುದು ನಿಮಗೆ ಗೊತ್ತೆ ಇದೆ. ಈ ಸಮಾರಂಭವನ್ನು ಜೆಡಿಎಸ್ ಕಟ್ಟಾ ಅಭಿಮಾನಿಗಳು ದೇವಸೇನಾಪತಿಯಾಗಿ ಷಣ್ಮುಖನನ್ನು ನೇಮಿಸಿದ ಪುರಾಣ ಕತೆಯೊಂದಿಗೆ ಹೋಲಿಸಿದ್ದಾರಂತೆ. ಪುರಾಣದಲ್ಲಿ ದೇವ ಸೇನಾಪತಿಯನ್ನಾಗಿ ಷಣ್ಮುಖ ಅಲಿಯಾಸ್ ಮುರುಗನನ್ನು ನೇಮಿಸಿದಾಗ ಈ ಹೊಸ ಸೇನಾಪತಿಗೆ ಎಲ್ಲಾ ದೇವತೆಗಳೂ ತಾವು ಅಲ್ಲಿಯವರೆಗೂ ಸಂಪಾದಿಸಿದ್ದ ಯುದ್ಧ ಕೌಶಲ್ಯಗಳನ್ನು ತಾವು ಸಂಗ್ರಹಿಸಿದ್ದ ಆಯುಧಗಳನ್ನು ಕುಮಾರಸ್ವಾಮಿಗೆ ಧಾರೆಯೆರೆದು ಕೊಟ್ಟಿದ್ದರು. ಆದರೆ ಈ ಜೆಡಿಎಸ್ ಕು.ಸ್ವಾಮಿಗೆ ಸಿಕ್ಕಿದ್ದು ತೀರ್ಥರೂಪರ ಪುಕ್ಕಟ್ಟೆ ಉಪದೇಶಾಮೃತ ಮಾತ್ರ. ಈ ಹೊಸ ದಂಡನಾಯಕನಿಗೆ ಶುಭವಾಗಲಿ ಎಂದು ಹಾರೈಸುತ್ತಾ, ಅಂದು ಮೆಂತ್ಯೆ ಸೊಪ್ಪಿನ ಭಾತನ್ನು ಮಾಡಿಸಿದ್ದು ಆಂ ಜನತಾ ಮತಲಬ್, ಬಡಬೋರೇಗೌಡರುಗಳಿಗೆ ಮಾತ್ರ ಎನ್ನುವುದನ್ನು ಸ್ಪಷ್ಟಪಡಿಸಬೇಕು. ನೂರು ಇಂಟು ನೂರರ ಅಂದಿನ ವಿಶಾಲ ವೇದಿಕೆಯ ಮೇಲೆ ರಾರಾಜಿಸಿದ ನೇತಾ ಲೋಗ್‌ಗಳಿಗೆ ಏರ್ಪಡಿಸಿದ್ದ ಷಡ್ರಸ ಭೋಜನದ ವಿವರಗಳು ಲಭ್ಯವಿಲ್ಲ.

ಬೆಂಗಳೂರಿನ ಮದುವೆ ರಿಸೆಪ್ಷನ್‌ಗಳು

- ಡಾ. ಡಿ.ವಿ. ಗುರುಪ್ರಸಾದ್

ಇತ್ತೀಚೆಗಲಾಗೆ ಬೆಂಗಳೂರು ನಗರದಲ್ಲಿ ಹೊಸ ಸಂಪ್ರದಾಯವೊಂದು ಹುಟ್ಟಿಕೊಂಡಿದೆ. ವಿವಾಹ ಬಂಧನಕ್ಕೆ ಮುಂಚೆಯೇ ಮದುವೆಯ ಆರತಕ್ಷತೆ ಅಥವಾ ರಿಸೆಪ್ಷನ್ ಸಮಾರಂಭ ನಡೆಸುವುದು. ಮದುವೆ ನಡೆಯುವ ಸಭಾಂಗಣದ ಬಾಡಿಗೆ ಉಳಿಸಲು ವಿವಾಹ ಮುಹೂರ್ತದ ಹಿಂದಿನ ಸಂಜೆಯೇ ಆರತಕ್ಷತೆ ಕಾರ್ಯಕ್ರಮ ಮುಗಿಸಿ, ಮಾರನೇ ದಿನ ವಿವಾಹವನ್ನು ಮುಗಿಸಿ, ಮಧ್ಯಾಹ್ನದ ವೇಳೆಗೆ ಊಟಮಾಡಿ ಸಮಾರಂಭದ ಜಾಗ ಖಾಲಿ ಮಾಡುವುದು ಹೆಚ್ಚು ಜನ ಅನುಸರಿಸುತ್ತಿರುವ ಈಗಿನ ಪದ್ಧತಿ.

ಮೊನ್ನೆ ವಿವಾಹ ಸಮಾರಂಭವೊಂದರ ಆರತಕ್ಷತೆಗೆ ಹೋಗಿದ್ದೆ. ಆರತಕ್ಷತೆ ಸರಿಯಾಗಿ ಸಂಜೆ 6-30ಕ್ಕೆ ಎಂದು ಪತ್ರಿಕೆಯಲ್ಲಿ ಬರೆದಿತ್ತು. ಸಮಾರಂಭದ ಹಾಲ್ ನಮ್ಮ ಮನೆಯಿಂದ ಸಾಕಷ್ಟು ದೂರ ಇದ್ದುದರಿಂದ ನನ್ನ ಹೆಂಡತಿಯ ಜೊತೆ 5-30ಕ್ಕೇ ಮನೆ ಬಿಟ್ಟೆ. ನಿಮ್ಮ ತರಹ ಬ್ರಿಟೀಷರಂತೆ ಟೈಮ್‌ಗೆ ಸರಿಯಾಗಿ ಯಾರೂ ನಡೆದುಕೊಳ್ಳುವುದಿಲ್ಲ, ನಿಧಾನವಾಗಿ ಹೋಗೋಣ ಎಂದು ನನ್ನ ಹೆಂಡತಿ ಒತ್ತಿ ಒತ್ತಿ ಹೇಳಿದರೂ ನಾನು ಅವಳ ಮಾತು ಕೇಳಲಿಲ್ಲ. ಅವಳಿಗೆ ಡ್ರೆಸ್ ಮಾಡಿಕೊಳ್ಳಲು ಸಾಕಷ್ಟು ಸಮಯ ಸಿಗಲಿಲ್ಲವೆಂದು ನನ್ನ ಮೇಲೆ ತುಂಬಾ ಕೋಪ ಬಂದು ಉಪ್ ಅಂತ ಮುಖ ಉಬ್ಬಿಸಿಕೊಂಡಿದ್ದಳು. ಉಸ್ಸಪ್ಪಾ ಎಂದು ಒಂದು ಗಂಟೆ ಪ್ರಯಾಣದ ನಂತರ ಸಮಾರಂಭದ ಜಾಗಕ್ಕೆ ಹೋದಾಗ ಹಾಲಿನಲ್ಲಿ ಯಾರೂ ಆಹ್ವಾನಿತರು ಕಾಣಲಿಲ್ಲ. ಕೆಲವು ವ್ಯಕ್ತಿಗಳು ಸಮಾರಂಭದ ಸ್ಥಳದ ಅಲಂಕಾರದಲ್ಲಿ ತೊಡಗಿದ್ದರು. ಇನ್ನು ಕೆಲವರು ಹಾಲ್‌ನ ಕಸ ಗುಡಿಸುತ್ತಾ ಕುರ್ಚಿಗಳನ್ನು ಅಣಿಮಾಡಿ ಇಡುತ್ತಿದ್ದರು. ನಮ್ಮನ್ನು ಬರಮಾಡಿಕೊಳ್ಳಲು ಯಾರೂ ಇರಲಿಲ್ಲ. ಇನ್ನೇನೂ ಬಂದುಬಿಡುತ್ತಾರೆ ಬಾ ಎಂದು ನನ್ನ ಹೆಂಡತಿಗೆ ಹೇಳಿ ಮುಂದಿನ ಸಾಲಿನ ಕುರ್ಚಿಯೊಂದರಲ್ಲಿ ಕುಳಿತೆ. ನಾನು ಮೊದಲೇ ಹೇಳಿದೆ ನೀವೆಲ್ಲಿ ನನ್ನ ಮಾತು ಕೇಳ್ತೀರಿ ಎಂದು ನನ್ನ ಶ್ರೀಮತಿ ಬೇಸರ ವ್ಯಕ್ತಪಡಿಸಿದಳು. ಏಳುಗಂಟೆ ವೇಳೆಗೆ ಅಲ್ಲಿದ್ದ ವ್ಯಕ್ತಿಗಳು ಹಾಲನ್ನು ಶುಚಿಗೊಳಿಸಿ ಮುಗಿಸಿದರು. 7-15 ಆದರೂ ವಧುವರರಾಗಲೀ ಇಲ್ಲಾ ಅವರ ಕುಟುಂಬದವರಾಗಲೀ ಕಂಡುಬರದಿದ್ದುದರಿಂದ ಮನೆಗೆ ವಾಪಸ್ಸು ಹೋಗೋಣವೆಂದು ಪತ್ನಿಯನ್ನು ದಬ್ಬಿಕೊಂಡು ಹೊರಗೆ ನಡೆಯಲು ಹೊರಟಾಗ ಒಬ್ಬ ವ್ಯಕ್ತಿ ಬಂದ, ಪಾಪ ಹಾಗೇ ಹೋಗುತ್ತಿದ್ದೀರಲ್ಲಾ, ಇಲ್ಲೇ ಕೆಳಗೆ ಬಂದು ಊಟಮಾಡಿ ಹೋಗಿ ಎಂದ. ನೀವು ಯಾರು ಎಂದು ಕೇಳಿದೆ. ಈ ಮದುವೆ ಅಡಿಗೆ ಕಾಂಟ್ರಾಕ್ಟರ್ ಎಂದ. ವಧೂವರರು ಬರುವುದು ಇನ್ನು ತಡವೇ ಎಂದೆ, ಏನು ಸ್ವಾಮಿ ಹೀಗೆ ಕೇಳುತ್ತೀರಿ. ಈ ಬೆಂಗಳೂರಿನ ಟ್ರಾಫಿಕ್ ಪ್ರಾಬ್ಲಮ್ ನಿಮಗೆ ಗೊತ್ತೇ ಇದೆಯಲ್ಲ, ವಧುವಿನ ಕಡೆಯವರು ಸಂಜೆ ಏಳು ಗಂಟೆಗೆ ಮನೆ ಬಿಟ್ಟರಂತೆ, ಟ್ರಾಫಿಕ್ ಜಾಮ್‌ನಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ ಎಂದ. ನಾವು ವರನ ಕಡೆಯವರು. ವರ ಯಾವಾಗ ಬರುತ್ತಾರೆಂದು ಕೇಳಿದೆ. ವಧುವಿನ


ಕಡೆಯವರು ಈ ಹಾಲ್‌ಗೆ ಬಂದ ನಂತರ ಅವರುಗಳು ಮನೆ ಬಿಡುತ್ತಾರಂತೆ ಅವರ ಮನೆ ಇಲ್ಲೇ ಹತ್ತಿರದಲ್ಲಿದೆ. ನೀವು ಬಳಲಿದಂತೆ ತೋರುತ್ತದೆ. ಊಟ ಮಾಡಿ ಮುಗಿಸಿ ಅಷ್ಟರಲ್ಲಿ ವಧೂವರರು ಬಂದೇ ಬಿಡುತ್ತಾರೆ ಎಂದು ಬಲವಂತದಿಂದ ನಮ್ಮನ್ನು ಡೈನಿಂಗ್ ಹಾಲ್‌ಗೆ ಕರೆದೊಯ್ದು ಊಟ ಮಾಡಿಸಿಯೇಬಿಟ್ಟ. ಕೈ ತೊಳೆದು ಮೇಲಿದ್ದ ಹಾಲ್‌ಗೆ ಬಂದಾಗ ಆಗತಾನೇ ವಧುವಿನ ಆಗಮನವಾಗಿತ್ತು. ವರ ಇನ್ನೂ ಬಂದಿರಲಿಲ್ಲ. ವಧುವಿಗೇ ಕಂಗ್ರಾಟ್ಸ್ ಹೇಳಿ ವರನಿಗೆ ಕಾಯದೇ ಕಾಲಿಗೆ ಬುದ್ಧಿ ಹೇಳಿದೆವು. ಇನ್ನು ಮುಂದೆ ಯಾವ ಮದುವೆ ರಿಸೆಪ್ಷನ್‌ಗೂ ಸಮಯಕ್ಕೆ ಸರಿಯಾಗಿ ಹೋಗಲೇಬಾರದು ಎಂದು ಅಂದೇ ನಿರ್ಧರಿಸಿದೆ.

ಮತ್ತೊಂದು ಮದುವೆ ಆರತಕ್ಷತೆಗೆ ಹೋಗಬೇಕಾಗಿತ್ತು. ಆಹ್ವಾನ ಇತ್ತವರು ನನ್ನ ಕಿರಿಯ ಸಹೋದ್ಯೋಗಿಯೊಬ್ಬರು. 6-30 ಗಂಟೆಗೆ ಆರತಕ್ಷತೆ ಎಂದು ಬರೆದಿದ್ದರೂ ನಾನು ಈ ಹಿಂದೆಯೇ ತೀರ್ಮಾನ ಮಾಡಿದ್ದಂತೆ 7-30ಕ್ಕೆ ಸಭಾಂಗಣಕ್ಕೆ ಹೋದೆ. ನನ್ನ ಸಹೋದ್ಯೋಗಿಯ ಬಂಧು-ಮಿತ್ರರಿಂದ ಸಭಾಂಗಣ ಕಿಕ್ಕಿರಿದು ತುಂಬಿತ್ತು. ಒಂದು ಮೂಲೆಯಲ್ಲಿ ಆರ್ಕೇಸ್ಟ್ರಾ ಗುಂಪೊಂದು ಹೆಸರಾಂತ ಕನ್ನಡದ ಹಾಡುಗಳನ್ನು ಹಾಡುತ್ತಿದ್ದರು. ಎಲ್ಲಾ ಸಭಿಕರು ಅವರತ್ತಲೇ ದೃಷ್ಟಿಯಿಟ್ಟು ಸಂಗೀತವನ್ನು ಎಂಜಾಯ್ ಮಾಡುತ್ತಿದ್ದರು. ನನ್ನನ್ನು ನೋಡಿದ ಕೂಡಲೇ ನನ್ನ ಕಿರಿಯ ಸಹೋದ್ಯೋಗಿ ಓಡೋಡಿ ಬಂದು ನನ್ನನ್ನು ಮುಂದಿನ ಸಾಲಿನಲ್ಲಿ ಕುಳ್ಳಿರಿಸಿದರು. ವಿ.ಐ.ಪಿ. ಗಳಿಗೆಂದೇ ರಿಸರ್ವ್ ಮಾಡಿದ್ದ ಆ ಸಾಲಿನಲ್ಲಿ ನನ್ನನ್ನು ಬಿಟ್ಟು ಬೇರೆ ಯಾರೂ ಇರಲಿಲ್ಲ. ಏನಪ್ಪಾ ಯಾವಾಗ ಆರತಕ್ಷತೆ ಪ್ರಾರಂಭಿಸುತ್ತೀರಿ ಎಂದು ಕೇಳಿದೆ. ಹ್ಹೆ ಹ್ಹೆ ಹ್ಹೆ . . . ನನ್ನ ಮಗಳು ಬ್ಯೂಟಿ ಪಾರ್ಲರ್‌ಗೆ ಹೋಗಿದ್ದಾಳೆ, ಬಂದ ತಕ್ಷಣ ಪ್ರಾರಂಭಿಸುತ್ತೇವೆ ಎಂದ. ಅಲ್ಲಪ್ಪಾ ನನಗೆ ಬೇರೊಂದು ಸಮಾರಂಭಕ್ಕೆ ಹೋಗಬೇಕಾಗಿದೆ ಎಂದಾಗ, ಹಾಗಾ ಸರ್ ಪರವಾಗಿಲ್ಲ, ನೀವು ನನ್ನ ಭಾವಿ ಅಳಿಯನನ್ನು ನೋಡಿ ವಿಷ್ ಮಾಡಿ ಹೊರಟುಬಿಡಿ ಎಂದು ನೇರವಾಗಿ ನನ್ನನ್ನು ಸ್ಟೇಜ್‌ನ ಬಲಭಾಗದಲ್ಲಿರುವ ಕೋಣೆಗೆ ಕರೆದುಕೊಂಡು ಹೋಗಿ ಅಳಿಯಂದಿರ ಪರಿಚಯ ಮಾಡಿಸಿದ. ವರನಿಗೆ ಶುಭಾಶಯ ಹೇಳಿ ಹೊರಗೆ ಬಂದೆ. ವಧುವಿಗೆ ಕೊಡಬೇಕೆಂದು ತಂದಿದ್ದ ಹೂಗುಚ್ಛ ನನ್ನ ಕೈಯಲ್ಲಿಯೇ ಉಳಿದಿತ್ತು. ಅದನ್ನು ನೋಡಿದ ನನ್ನ ಸಹೋದ್ಯೋಗಿ ನೀವೇನು ವರಿ ಮಾಡ್ಕೋಬೇಡಿ, ಈ ಹೂಗುಚ್ಛವನ್ನು ನನಗೆ ಕೊಟ್ಟುಬಿಡಿ ಎಂದು ಹೇಳಿ ಆತನ ಪತ್ನಿಯನ್ನು ಕರೆದ. ಆತನಿಗೆ ಹಾಗೂ ಆತನ ಪತ್ನಿಗೆ ನಾನು ಹೂ ಗುಚ್ಛ ಕೊಡುತ್ತಿರುವಾಗ ಆತ ಅಲ್ಲೇ ಇದ್ದ ಫೋಟೋಗ್ರಾಫರ್‌ರನ್ನು ಕರೆಸಿ ಈ ಘಟನೆಯ ಫೋಟೋ ತೆಗೆಸಿಯೇ ಬಿಟ್ಟ. ಅಲ್ಲಾ ರೀ ನಿಮ್ಮ ಮದುಮಕ್ಕಳಿಗೆ ವಿಷ್ ಮಾಡಿ ಫೋಟೋ ತೆಗೆಸಿಕೊಳ್ಳಬೇಕಾದ ಬದಲು ನೀವು ದಂಪತಿಗಳ ಜೊತೆ ಫೋಟೋ ತೆಗೆಸಿಕೊಂಡ ಹಾಗಾಯಿತಲ್ಲ ಎಂದೆ. ಪರವಾಗಿಲ್ಲ ಬಿಡಿ ಸರ್ ನಾವೇನು ಹೊಸದಾಗಿ ಮದುವೆ ಆದವರಿಗಿಂತ ಭಿನ್ನವಲ್ಲ, 25 ವರ್ಷವಾದರೂ ನನ್ನ ಹೆಂಡತಿಯನ್ನು ಮೊದಲಿನಷ್ಟೇ ಪ್ರೀತಿಸುತ್ತಿದ್ದೇನೆಂದು ಡೈಲಾಗ್ ಬೇರೆ ಹೊಡೆದ. ಸರಿ ಎಂದು ನಕ್ಕು ವಾಪಸ್ಸಾದೆ.

ಒಬ್ಬ ಹಿರಿಯ ಅಧಿಕಾರಿಯ ಮಗಳ ಮದುವೆಗೆ ಕರೆದಿದ್ದರು. ಸಭಾಂಗಣ ಆಹ್ವಾನಿತರಿಂದ ತುಂಬಿತ್ತು. ಆದರೆ ವೇದಿಕೆ ಮಾತ್ರ ಖಾಲಿ. ಹಲವಾರು ಜನ ಕೆಲಸಗಾರರು ಹೂಗುಚ್ಛಗಳು, ಹೂವಿನ ಸರಗಳು, ರಂಗು ರಂಗಿನ ದೀಪಗಳ ಮಾಲೆ ಹಿಡಿದು ವೇದಿಕೆಯನ್ನು ಸಜ್ಜು ಗೊಳಿಸುತ್ತಿದ್ದರು. ಸುಮಾರು ಅರ್ಧ ತಾಸು ಕಳೆದರೂ ವೇದಿಕೆಯ ಅಲಂಕಾರವೇ ಮುಗಿದಿಲ್ಲ. ವಧೂವರರು ಕೂರಲು ಉಯ್ಯಾಲೆಯೊಂದನ್ನು ವೇದಿಕೆಯ ಮೇಲೆ ಜೋಡಿಸಿದರು. ಅದನ್ನು ಪರೀಕ್ಷಿಸಲು ಇಬ್ಬರು ಕೆಲಸಗಾರರು ಅದರ ಮೇಲೆ ಕೂತರು. ಧೊಪ್ಪೆಂದು ಉಯ್ಯಾಲೆ ಕೆಳಗೆ ಬಿದ್ದು ಕೆಲಸಗಾರರಿಗೆ ಪೆಟ್ಟಾಯಿತು. ಸದ್ಯ ವಧೂವರರಿಗಾಗಬೇಕಾದ ಅನಾಹುತ ತಪ್ಪಿತಲ್ಲ ಎಂದು ಸಭಿಕರು ಸಾಮೂಹಿಕವಾಗಿ ನಿಟ್ಟುಸಿರು ಬಿಟ್ಟರು. ವಧುವಿನ ತಂದೆ ವೇದಿಕೆ ಅಲಂಕಾರ ವಹಿಸಿಕೊಂಡಿದ್ದ ಕಂಟ್ರಾಕ್ಟರ್‌ಗೆ ದಬಾಯಿಸಿದರು. ಅವನು ಅಲ್ಲಾ ಸಾರ್ ಈ ಸಭಾಂಗಣವನ್ನು ನೀವು ನನಗೆ ತೆರವು ಮಾಡಿಕೊಟ್ಟದ್ದು ಐದು ಗಂಟೆಯ ನಂತರ, ಹೇಗೆ ಕೆಲಸ ಬೇಗ ಮುಗಿಯುತ್ತೆ ಎಂದ ಏನಪ್ಪಾ ಮಾಡುವುದು, ಈ ಸಭಾಂಗಣ ಬಾಡಿಗೆ ಹಿಡಿದಿದ್ದ ಹಿಂದಿನ ಮದುವೆ ಪಾರ್ಟಿ ನಮಗೆ ಜಾಗ ಖಾಲಿ ಮಾಡಿಕೊಟ್ಟಿದ್ದೇ ನಾಲ್ಕೂವರೆಗೆ. ಹೀಗಾಗುತ್ತೇ ಎಂದು ನನಗೇನು ಕನಸು ಬಿದ್ದಿತ್ತಾ ಎಂದರು ಹಿರಿಯ ಅಧಿಕಾರಿ. ಪಾಪ ವಧೂವರರಿಬ್ಬರೂ ತಂತಮ್ಮ ಕೋಣೆಗಳಲ್ಲಿ ಮುಖ ಬಾಡಿಸಿಕೊಂಡು ಕಾಯುತ್ತಲೇ ಇದ್ದರಂತೆ. ಪರವಾಗಿಲ್ಲ, ಕೇವಲ ಅತಿಥಿಗಳಷ್ಟೇ ಕಾಯಲಿಲ್ಲ – ವಧೂವರರೂ ಕಾದರು ಎಂದು ಸಮಾಧಾನ ಪಟ್ಟುಕೊಂಡು ಊಟ ಮಾಡಿಕೊಂಡು ಹೊರಬಂದೆ.

ಸಾಮಾನ್ಯವಾಗಿ ನಾನು ಸಮಯಕ್ಕೆ ಸರಿಯಾಗಿ ಮದುವೆ ರಿಸೆಪ್ಷನ್‌ಗಳಿಗೆ ಹೊರಡುವ ಅಭ್ಯಾಸ ರೂಢಿಸಿಕೊಂಡಿದ್ದರಿಂದ ಬಹಳಷ್ಟು ಸಮಾರಂಭಗಳಿಗೆ ನನ್ನ ಹೆಂಡತಿ ನನ್ನ ಜೊತೆ ಬರುವುದಿಲ್ಲ. ಹೀಗಾಗಿ ನಾನು ಒಬ್ಬಂಟಿಗನಾಗಿಯೇ ಹೂಗುಚ್ಛ ಹಿಡಿದುಕೊಂಡು ಮದುವೆಗಳಲ್ಲಿ ಕಾಣಸಿಗುತ್ತೇನೆ. ಒಂದು ಸಂಜೆ ಆಪ್ತಮಿತ್ರರೊಬ್ಬರ ಮಗಳ ಮದುವೆಗೆ ಹೋಗಿದ್ದೆ. ನನ್ನ ಮಿತ್ರರು ರಾಜಕೀಯ ಪಕ್ಷವೊಂದರ ಛೋಟಾ ಮುಖಂಡರು ಸಮಾರಂಭಕ್ಕೆ ರಾಜಕೀಯ ಪಕ್ಷ ಎನ್ನುವ ಬೇದಭಾವವಿಲ್ಲದೇ ಎಲ್ಲ ಪಕ್ಷದವರನ್ನೂ ಆಹ್ವಾನಿಸಿದ್ದರು. ನಾನು ಸಮಾರಂಭದ ಹಾಲ್ ಪ್ರವೇಶಿಸಿದಾಗ ಕಣ್ಣು ಕೋರೈಸುವ ಬೆಳಕನ್ನು ನನ್ನ ಮೇಲೆ ಚೆಲ್ಲಿದ ವಿಡಿಯೋಗ್ರಾಫರ್‌ನಿಂದಾಗಿ ಒಂದು ಕ್ಷಣ ಏನಾಗುತ್ತಿದೆ ಎಂದು ತಿಳಿಯಲಿಲ್ಲ. ವಧುವಿನ ತಂದೆ ನನ್ನನ್ನು ಬರಮಾಡಿಕೊಂಡು ಕುರ್ಚಿಯೊಂದರಲ್ಲಿ ಕುಳ್ಳಿರಿಸಿದರು. ವೇದಿಕೆಯತ್ತ ನೋಡಿದೆ. ಎರಡು ದೊಡ್ಡ ವಿಐಪಿ ಕುರ್ಚಿಗಳು ವಧುವರರ ಆಗಮನವನ್ನೇ ನಿರೀಕ್ಷಿಸುತ್ತಿದ್ದವು. ಇನ್ನೇನು 10 ನಿಮಿಷದಲ್ಲಿ ಸಮಾರಂಭ ಪ್ರಾರಂಭವಾಗುತ್ತಿದೆಯೆಂದು ಹೇಳಿ ವಧುವಿನ ತಂದೆ ನನ್ನ ಕೈಗೆ ಒಂದು ಲೋಟ ಶರಬತ್ತನ್ನು ತಂದು ಇದನ್ನು ಕುಡಿಯುತ್ತಿರಿ ಎಂದರು. ಅಷ್ಟರಲ್ಲಿ ಎರಡು ದೊಡ್ಡ ದೊಡ್ಡ ನಾಯಿಗಳು ಇದ್ದಕ್ಕಿದ್ದಂತೆ ವೇದಿಕೆ ಮೇಲೆ ಪ್ರವೇಶಿಸಿದವು. ಅವನ್ನು ನೋಡಿದ ನಾನು ಒಂದು ಕ್ಷಣ ಗಾಬರಿಯಾದೆ. ಏನಪ್ಪ ಇದು

ನಾಯಿಗಳು ಎಂದು ನಾನು ಉದ್ಗರಿಸಿದಾಗ ನನ್ನ ಮಿತ್ರರು, ಸರ್ ಇದು ನಿಮ್ಮ ಸಹೋದ್ಯೋಗಿಗಳೇ ಎಂದರು. ನನಗೆ ಅರ್ಥವಾಗಲಿಲ್ಲ. ಇದೇನು ಸರ್ ನೀವು ಟ್ಯೂಬ್‌ಲೈಟ್. ಇವು ನಿಮ್ಮದೇ ಇಲಾಖೆಯ ನಾಯಿಗಳಲ್ಲವೇ? ಎಂದರು. ಓಹೋ! ಪೊಲೀಸ್ ನಾಯಿಗಳೇ ಎಂದೆ. ಹೌದು ಎಂದರು. ನನ್ನನ್ನು ನೋಡಲೆಂದು ಈ ನಾಯಿಗಳು ಇಲ್ಲಿ ಬರಲಿಲ್ಲವಲ್ಲ ಎಂದು ಉದ್ಗರಿಸಿದೆ. ಹಾಗಲ್ಲ ಸರ್ ಆರತಕ್ಷತೆ ಸಮಾರಂಭಕ್ಕೆ ಮಾಜಿ ಪ್ರಧಾನಮಂತ್ರಿಗಳನ್ನು ಆಹ್ವಾನಿಸಿದ್ದೇವೆ. ಅವರು ಇನ್ನೇನು ಬರುತ್ತಾರೆ. ಅದಕ್ಕಾಗಿಯೇ ಈ ನಾಯಿಗಳು ಬಂದು ವಿವಾಹಕ್ಕೆ ಮುಂಚಿತವಾಗಿಯೇ ತಪಾಸಣೆ ನಡೆಸುತ್ತಿವೆ ಎಂದರು ಅಷ್ಟರಲ್ಲಿ ನಮ್ಮ ಇಲಾಖೆಯ ಕೆಲವು ಸಹೋದ್ಯೋಗಿಗಳು ವೇದಿಕೆಯ ಮೇಲೆ ಬಂದು ಬಾಂಬ್ ತಪಾಸಣೆ ಯಂತ್ರಗಳಿಂದ ವೇದಿಕೆಯನ್ನೆಲ್ಲಾ ಜಾಲಾಡಿದರು. ನನ್ನನ್ನು ನೋಡಿದ ಅವರು ಅಟೆಂಷನ್‌ನಲ್ಲಿ ನಿಂತು ನೀಟಾದ ಸಲ್ಯೂಟ್ ಹೊಡೆದರು. ಇದು ಕೂಡ ವಿಡಿಯೋದಲ್ಲಿ ರೆಕಾರ್ಡ್ ಆಗಿಯೇ ಬಿಟ್ಟಿತ್ತು. ವಧುವರರಿಗಿಂತ ಮುಂಚೆಯೇ ಪೊಲೀಸ್ ನಾಯಿಗಳು ಆಕರ್ಷಣೆಯ ಬಿಂದುಗಳಾದವಲ್ಲ ಎಂದು ಮನಸ್ಸಿನಲ್ಲಿ ನಕ್ಕು ತದನಂತರ ಬಂದ ವಧುವರರಿಗೆ ಆಶೀರ್ವದಿಸಿ ಮನೆಗೆ ವಾಪಸ್ಸಾದೆ.



ಇಂಟರ್‌ನೆಟ್ ಕೃಪೆ

ಸಂಗೀತ ಪಾಠ

- ಸಿ.ಆರ್. ಸತ್ಯ

ನನಗೆ ಅರವತ್ತನೆಯ ವಯಸ್ಸಿನಲ್ಲಿ ಸುಗಮ ಸಂಗೀತ ಕಲಿಯೋ ಹುಚ್ಚು ಹತ್ತಿತು. ಮನೆಯ ಹತ್ತಿರವಲ್ಲೇ ಇದ್ದ ಒಬ್ಬ ಸಂಗೀತ ಮೇಷ್ಟ್ರ ಬಳಿ ಹೋದೆ. ಮನೆಯೊಳಗೆ ಕಾಲಿಟ್ಟಿದ್ದೇ ತಡ, ಅವರು ರೂಮಿನೊಳಗೆ ಕುಳಿತ್ತಿದ್ದ ಇಬ್ಬರು ಧಡೂತಿ ವಿದ್ಯಾರ್ಥಿಗಳಿಗೆ ಬೈಗಳ ಹಾಡುತ್ತಿದ್ದುದು ಕೇಳಿಸ್ತು: "ಅಲ್ರೀ, ಚಿಕ್ಕಳ ಮಕ್ಕಳ ಕೂತ್ಕೊಳ್ಳೋಕ್ಕೆ ನಿಮ್ಮ ಕೈಲಿ ಆಗೋದಿಲ್ಲವಲ್ಲ; ಇನ್ನು ಸಂಗೀತ ಪ್ಯಾಗ್ರೀ ಕಲೀತೀರಾ? ಮೋಟರ್ ಬೈಕ್ ಮೇಲೆ ಹುಡುಗೀರಿಗೆ ಪೋಸ್ ಕೊಟ್ಕೊಂಡು ಘಂಟೆಗಟ್ಟಲೆ ಕೂತಿರ್ತಿರಾ. ಇಲ್ಲಿ ಪ್ರಾಕ್ಟೀಸ್‌ಗಾದ್ರೂ ಒಂದು ಅರ್ಧ ಘಂಟೆ ಕೂತ್ಕೋಬಾರ್ದೇನ್ರೀ....?" ಅಂತೆಲ್ಲಾ ಪೂಜೆ ಮಾಡ್ತಿದ್ದರು. ನನಗೆ ಆಗಲೇ ಬೆವರೋಕ್ಕೆ ಶುರುವಾಯ್ತು. ನನ್ನ ಕಡೆ ತಿರುಗಿ, "ಯಾರ್ರೀ ನೀವು? ಏನು ಬೇಕಾಗಿತ್ತು?" ಅಂತ ಕೇಳಿದ್ರು "ಅದೇ ಫೋನ್ ಮಾಡಿದ್ನಲ್ಲಾ ಸಾರ್ ಸಂಗೀತ ಹೇಳಿಸ್ಕೊಳ್ಳೋಕ್ಕೆ. ನೀವು ಈಗ ಬಾ ಅಂತ ಅಂದಿದ್ರಿ" ಅಂತ ಜ್ಞಾಪಿಸಿದೆ. "ಓ, ಅದು ನೀವೇನಾ? ನಾನು ಯಾರೋ ಹುಡುಗಾ ಮಾಡಿದ್ದಾ ಅಂದ್ಕೊಂಡೆ. ಏನು ನಿಮ್ಮ ವಯಸ್ಸು?" ಅಂತ ಕೇಳಿದ್ರು.

"ಅರವತ್ತು" ಅಂದೆ

"ಎಲ್ಲಾ ಹಲ್ಲುಗಳೂ ಇವ್ವೇನ್ರೀ?" ಅಂತ ಕೇಳಿದ್ರು. "ಹ್ಞೂ" ಅಂದೆ. "ಅಸ್ತಮಾ ಪೇಶೆಂಟ್ ಏನು ನೀವು?" ಅಂತ ವಿಚಾರಿಸಿದರು. "ಇನ್ನೂ ಆಗಿಲ್ಲಾ ಸಾರ್. ಆದ ತಕ್ಷಣ ನಿಮಗೆ ಗೊತ್ತಾಗದೇ ಇರುತ್ಯೆ?" ಅಂದೆ. "ಗುಡ್, ಗುಡ್, ಒಂದು ಕೆಲಸ ಮಾಡಿ. ಎರಡು ಸಲ ನೆಲದ ಮೇಲೆ ಕೂತು ಮೇಲಕ್ಕೇಳಿ ನೋಡೋಣ" ಅಂತ ಹುಕುಂ ಕೊಟ್ರು. ಎರಡು ಬಸ್ಕಿ ಹೊಡೆದೆ. "ಪರವಾಗಿಲ್ಲ, ಜಾಯಿಂಟುಗಳು ಕೆಲಸ ಮಾಡ್ತಿವೆ. ಇನ್ನು ನಿಮ್ಮ ಗಂಟಲು ಹೇಗಿದೆ ನೋಡೋಣ... ಅಂದ್ಹಾಗೆ, ನಿಮಗ್ಯಾಕೆ ಈ ವಯಸ್ಸಿನಲ್ಲಿ ಸಂಗೀತ ಕಲಿಯೋ ಹುಚ್ಚು ಬಂತು?" ಅಂತ ಕೇಳಿದರು. "ರಿಟೈರ್ಡ್ ಆದ ಸಾರ್. ಮನೇಲಿ ಹೆಂಡ್ತಿ ಕಾಟ. ಏನಾದರೂ ಡೈವರ್ಶನ್ ಇರಲಿ ಅಂತ. ಅದೂ ಅಲ್ಲದೆ ಚಿಕ್ಕಂದಿನಿಂದಲೂ ಸಂಗೀತದಲ್ಲಿ ಆಸಕ್ತಿ" ಅಂತ ವಿವರಣೆ ಕೊಟ್ಟೆ " ಅಂದರೆ, ಏನು ಅರ್ಥ?" ಅಂತ ಕೇಳಿದರು. "ನನ್ನ ಐದನೇ ವಯಸ್ಸಿನಲ್ಲೇ ರಾಮನವಮಿ ಸಂಗೀತೋತ್ಸವಕ್ಕೆ ತಪ್ಪದೇ ಹೋಗಿ ಪ್ರಸಾದ ಹಂಚುತ್ತಿದ್ದೆ ಸಾರ್" ಅಂದೆ.

"ಸರಿ, ಒಂದು ಸ್ಯಾಂಪಲ್ ಹಾಡು ಹಾಡಿ ನೋಡೋಣ" ಅಂತ ಅಪ್ಪಣೆ ಕೊಟ್ರು.

"ಖಂಡಿತವಾಗಿಯೂ ಸಾರ್. ಆದರೆ ಅದಕ್ಕೆ ಮುಂಚೆ ಒಂದು ಪ್ರಶ್ನೆ, ನಿಮ್ಮ

ಮನೆಯಲ್ಲೋ ನಿಮ್ಮ ಪಕ್ಕದ ಮನೆಗಳಲ್ಲೋ ಪಾಮರೇನಿಯನ್ ಜಾತಿ ನಾಯಿಗಳಿವೆಯೆ?'' ಅಂತ ಕೇಳಿದೆ.

''ಇಲ್ಲ, ಯಾಕೆ?'' ಅಂದ್ರು

''ಯಾಕೂ ಇಲ್ಲ, ನಾನು ಹಾಡು ಹೇಳಿದಾಗಲೆಲ್ಲಾ ನಮ್ಮ ಅಕ್ಕಪಕ್ಕದ ಮನೆಗಳಲ್ಲಿರೋ ಎರಡು ಪಾಮರೇನಿಯನ್ನುಗಳು ಜಗಳಕ್ಕೆ ಶುರುಮಾಡಿ ನಾನು ಹಾಡು ನಿಲ್ಲಿಸೋವರೆಗೂ ಬೊಗಳ್ತಾನೇ ಇರುತ್ವೆ. ಅವಕ್ಕೆ ಪಾಪ ನನ್ನ ಹಾಡು ಅಲರ್ಜಿ ಅಂತ ಕಾಣುತ್ತೆ. ಅದಕ್ಕೇ ಕೇಳಿದೆ'' ಎಂದೆ.

''ಇನ್ನೊಂದು ಪ್ರಶ್ನೆ ಸಾರ್, ನಿಮ್ಮ ಮನೆಯಲ್ಲಿ U.P.S ಇದೆಯೆ?'' ಅಂದೆ.

''ಯಾಕ್ರೀ..?'' ಅಂತ ಕೇಳಿದ್ರು.

''ಏನಿಲ್ಲ ಸಾರ್, ನಾನು ಹಾಡು ಹೇಳಿದಾಗ ನಮ್ಮ ಮನೆಯ ಪಕ್ಕ ಇರೋ ಟ್ರಾನ್ಸ್‌ಫಾರ್ಮರ್ ಒಂದೆರಡು ಸಲ ಬರ್ನ್ಟ್ ಆಗಿ, ಪವರ್ ಶಟ್‌ಡೌನ್ ಆಗಿತ್ತು. ಅದಕ್ಕೆ ಕೇಳಿದೆ.''

''ಓ!...ಲೇ, ಆ U.P.S ಕೆಲಸ ಮಾಡ್ತಿದ್ಯೇನೇ?'' ಅಂತ ಮೇಷ್ಟ್ರು ಅಡುಗೆ ಮನೆಯ ಕಡೆ ಕೂಗಿ ಕೇಳಿದ್ರು. ಒಳಗಿನಿಂದ ''ಹ್ಞೂಂ!'' ಅಂತ ಉತ್ತರ ಬಂತು. ''ಸರಿ, ಏನೂ ತೊಂದರೆ ಇಲ್ಲ, ಹಾಡು ಹೇಳಿ'' ಅಂದರು.

''ಸಾರಿ ಸರ್, ಕೊನೆಯದೊಂದು ಸಂದೇಹ. ನಾನು ಅದನ್ನ ತೀರಿಸಿಕೊಳ್ಳಲೇಬೇಕು. ಇದು ನಿಮ್ಮ ಸ್ವಂತ ಮನೆಯೋ ಬಾಡಿಗೆ ಮನೆಯೋ?'' ಅಂತ ಕೇಳಿದೆ.

''ಯಾಕೆ?'' ಅಂತ ಮರು ಪ್ರಶ್ನೆ ಹಾಕಿದರು.

''ಹತ್ತು ವರುಷದ ಕೆಳಗೆ ಇನ್ನೊಬ್ಬ ಮೇಷ್ಟ್ರ ಬಳಿ ಸಂಗೀತ ಕಲಿಯೋಣ ಅಂತ ಒಂದುವಾರ ಪ್ರಯತ್ನ ಮಾಡಿದೆ. ಆದರೆ ಅವರು ವಾಸವಾಗಿದ್ದು ಬಾಡಿಗೆ ಮನೇಲಿ, ಒಂದು ದಿನ ಅವರ ಮನೆ ಮಾಲೀಕ – ನಾನು ಆಗ ತಾನೇ ಲಂಬೋಧರಾನೋ ಲಂಬೋಧರಾನೋ ಒಂದು ಸಾಲು ಹೇಳ್ತಿದ್ದೆ, ಒಳಗೆ ನುಗ್ಗಿ ಈ ಮನೆ ಬಿಟ್ಟು ಈಗಲೇ ಹೊರಡಿ. ಇಲ್ಲದಿದ್ದರೆ ನಿಮ್ಮನ್ನ ನಿಮ್ಮ ಆ ಶಿಷ್ಯನನ್ನ, ಶ್ರುತಿ ಪೆಟ್ಟಿಗೆ, ಹಾರ್ಮೋನಿಯಂ ಎಲ್ಲಾ ಹೊರಗೆ ಹಾಕ್ತೀನಿ ಅಂತ ಗರ್ಜಿಸಿದ. ಅದಕ್ಕೇ ಹೇಳಿದೆ.'' ಅಂದೆ.

''ಹಾಗೇನಿಲ್ಲ, ಈ ಫ್ಲಾಟ್ ಹೆಚ್ಚುಕಮ್ಮಿನಂದೇ ಅಂತ ಹೇಳಬಹುದು. ಇನ್ನೊಂದು ಹತ್ತು ಮಾಸಿಕ ಹಣ ಪಾವತಿ ಮಾಡಿದ್ರೆ ಆಯ್ತು – ರಿಜಿಸ್ಟ್ರೇಶನ್ನೂ ಆಗುತ್ತೆ. ಹ್ಞೂಂ ಹೇಳಿ'' ಅಂತ ಅಪ್ಪಣೆ ಕೊಟ್ರು.

ಸರಿ, ಕಣ್ಣುಮುಚ್ಚಿಕೊಂಡು ಆಲಾಪನೆ ಶುರುಮಾಡಿದೆ. ''ರ್ರೀ, ಸುಮ್ಮನೆ ನೇರವಾಗಿ ಒಂದು ಪಲ್ಲವೀನೋ ಅನುಪಲ್ಲವೀನೋ ಒದರಿ ಹೋಗೋಕ್ಕೆ ಹೇಳಬಾರ್ದ್ದೇ...?'' ಅಂತ

ಅಡುಗೆ ಮನೆಯಿಂದ ಆಕೆ ಹೇಳಿದ್ದು ಕೇಳಿಸ್ತು. ಆದರೂ ಭಾವಪರವಶನಾಗಿ, ಒಂದು ಪುರಂದರ ದಾಸರ ಕೀರ್ತನೆ - ಪೂರ್ಣವಾಗಿ, ಸುಶ್ರಾವ್ಯವಾಗಿ ಹೇಳಿ ಕಣ್ಣು ಬಿಟ್ಟೆ.

ನನ್ನ ಸುತ್ತಲೂ ಏನೋ ಕೆಲವು ಬದಲಾವಣೆಗಳು ಕಂಡವು. ನಾನು ಬಂದಾಗ ಇದ್ದ ಇಬ್ಬರು ವಿದ್ಯಾರ್ಥಿಗಳು ಈಗ ಪತ್ತೆಯೇ ಇರಲಿಲ್ಲ. ಮೂಲೆಯಲ್ಲಿ ಮೊದಲು ನೆಟ್ಟಗೆ ನಿಂತಿದ್ದ ಮೇಷ್ಟ್ರ ತಂಬೂರಿ, ಈಗ ಪೂರಾ ವಾಲಿಕೊಂಡಿತ್ತು. ಮೇಷ್ಟ್ರ ಒಂದೆ ಬೀರುವಿನಲ್ಲಿ ಜೋಡಿಸಿದ್ದ ಸಾಲ್ಕೈಮ ಪುಸ್ತಕಗಳು (ಅದರಲ್ಲಿ ಪುರಂದರದಾಸರ ಕೀರ್ತನೆಗಳೂ ಸೇರಿ) ಕೆಳಗೆ ನೆಲದ ಮೇಲೆ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಇವೆಲ್ಲಾ ಮೈನರ್ ಡ್ಯಾಮೇಜ್‌ಗಳು ಅಂತ ಸಮಾಧಾನ ತಂದುಕೊಂಡು ಮೇಷ್ಟ್ರ ಹೆಂಡತಿ, ಅಡುಗೆ ಮನೆಯಲ್ಲಿ, ಮೇಷ್ಟ್ರನ್ನ ಕೂರಿಸಿಕೊಂಡು ಅವರ ತಲೆಗೆ ತಣ್ಣೀರು ಹಾಕಿ ತಟ್ಟುತ್ತಿದ್ದರು. ಮೇಷ್ಟ್ರು ಹುಷಾರಾಗೇ ಕಂಡರೂನೂವೆ ಯಾಕೋ ಬಹಳ ಸುಸ್ತಾದ್ಹಾಗೆ ಕಾಣಿಸ್ತಿದ್ರು. ಪಾಪ, ಮೆಲ್ಲನೆ ಹೊರಬಂದು, "ಅಲ್ರೀ, ಗಜವಧನ ಬೇಡುವೆ ಅಂತ ಆ ಗಣೇಶನಿಗೆ ಆನೆ ಕೊಂದ ಪಾಪವನ್ನು ಹತ್ತಿಸಿದರಲ್ರೀ? ಆ ಪುಣ್ಯಾತ್ಮ ಪುರಂದರದಾಸರು ಏನಾದರೂ ಬದುಕಿದ್ರೆ ಅವರಿಗೆ - ನನಗೂನೂ ಒಂದು ಆಂಬುಲೆನ್ಸ್ ತರಿಸ್ಬೇಕಿತ್ತು." ಅಂತ ಉಸುರಿದರು.

ನಾನು ಆಶಾವಾದಿ, "ಸಾಹಿತ್ಯ ತಪ್ಪಾದರೆ ನಾನು ತಿದ್ಕೋತೀನಿ ಸಾರ್. ನನ್ನ ಸಂಗೀತ ಹೇಗಿತ್ತೊ? ಯಾವತ್ತಿನಿಂದ ಪಾಠಕ್ಕೆ ಬರಲಿ?" ಎಂದೆ.

ಅಷ್ಟರಲ್ಲೇ - ಅಲ್ಲಿಯ ತನಕ ಅಗೋಚರವಾಗಿದ್ದ ಮೇಷ್ಟ್ರ ಹೆಂಡತಿ - decision maker ಅವರೇ ಅಂತ ಕಾಣುತ್ತೆ. ಅಡುಗೆ ಮನೆಯಿಂದ ಹೊರ ಬಂದು ಹೇಳಿದ್ದು ಹೀಗೆ.

"ಸದ್ಯಕ್ಕೆ ನೀವು ಬೇರೆ ಮೇಷ್ಟ್ರನ್ನ ಹುಡುಕಿಕೊಳ್ಳಿ. ಯಾಕಂದ್ರೆ ನಾಳೆ ಅಥವಾ ನಾಡಿದ್ದರಲ್ಲಿ ನಾವು ಒಂದು ಪಾಮರೇನಿಯನ್ನ ತಂದು ಸಾಕೋಣ ಅಂತ ಅಂದ್ಕೊಡಿದ್ದೀವಿ. ಅದೂ ಅಲ್ಲದೆ ನಮ್ಮ ಮನೆಯ U.P.S ಸ್ವಲ್ಪ ಹಳೇ ಮಾಡಲ್ಲು ಹೊಸದು ಕೊಂಡುಕೊಳ್ಳೋಕ್ಕೆ ನಮ್ಮ ಕೈಲಿ ಸದ್ಯಕ್ಕಂತೂ ಆಗಲ್ಲ. ಅಂದ ಹಾಗೇ ಈ ಮನೆಯೇನೋ ಇನ್ನು ಹತ್ತು ತಿಂಗಳುಗಳಿಗೆ ನಮ್ಮದೇ ಆಗುತ್ತೆ. ಆದರೆ ಸದ್ಯದ ಮಾಲೀಕರೂ ನಮ್ಮ ಮನೆ ಮಹಡಿ ಮೇಲೆಯೇ ವಾಸವಾಗಿದ್ದಾರೆ. "ನಿಮ್ಮ ಕಂತುಗಳನ್ನು ನೀವೇ ಇಟ್ಕೊಳ್ಳಿ, ಸದ್ಯಕ್ಕೆ ನನ್ನ ಮನೆ ಬಿಟ್ಟು ಈಗಲೇ ಹೊರಡಿ" ಅಂತ ಅವರೇನಾದರೂ ನಮ್ಮನ್ನ ಹೊರಕ್ಕೆ ದಬ್ಬಿದರೆ, ದೇವರೇ ಗತಿ. ನಮ್ಮ ಯಜಮಾನರಿಗೂ ವಯಸ್ಸಾಗಿದೆ. ಬ್ಲಡ್ ಪ್ರೆಶರ್ ಪೇಶೆಂಟೂ. ನನಗೂನೂ ಡಯಾಬಿಟೀಸ್, ಮೊನ್ನೆ ತಾನೆ ಶುಗರ್ ಚೆಕ್ ಮಾಡಿಸಿಕೊಂಡು ಬಂದೆ. ಬರೀ ಹೊಟ್ಟೇಲೆ 190ರ ತನಕ-"

"ಇರಲಿ, ಅರ್ಥವಾಯ್ತು" ಅಂತ ತಕ್ಷಣ ಅವರ ಮನೆಯಿಂದ ಕಾಲು ಕಿತ್ತೆ.

ಅಪರಂಜಿ ಬಾಂಧವರೇ, ನಿಮಗೆ ಯಾರಾದರೂ 'ಗಟ್ಟಿಮುಟ್ಟಾದ' ಸಂಗೀತದ ಮೇಷ್ಟ್ರ ಪರಿಚಯವಿದ್ದರೆ, ಸ್ವಲ್ಪ ನನಗೆ ಅವರ ಅಡ್ರೆಸ್ಸು ಫೋನ್ ನಂಬರ್‌ನ ದಯವಿಟ್ಟು ಕೊಡಿ. ಥ್ಯಾಂಕ್ಸ್.

❖


ತುಂತುರು

- ದಂನಆ

- 'ನೂರು ಪತ್ರ ಬರೆದಿದ್ದೀನಿ. ಒಂದಕ್ಕೂ ಉತ್ತರ ಬರೆದಿಲ್ಲ'. ಶಿಷ್ಯ ಆಕ್ಷೇಪಿಸುತ್ತಾ ಗೊಣಗಿಕೊಂಡ.
  ಗುರು ಹೇಳಿದ: 'ಅದೇ ನನ್ನ ಉತ್ತರ.'
- Is there another word for synonym?
- ಹೃದಯಸ್ಪರ್ಶಿ ಚಿತ್ರಕ್ಕೊಂದು ಹೆಸರು ಕೊಡಿ ಎಂದಾಗ ಬಂದ ಸಲಹೆ: ಸ್ಟೆತಾಸ್ಕೋಪ್
- Beware of the wish you make for; it may even be granted.
- 'ಕೃಷ್ಣ ನೀ ಲೇಟ್ ಆಗಿ ಬಾರೋ' ಚಿತ್ರದ ಬಿಡುಗಡೆ ತಡವಾಗಿ ಆಗೋದಿಲ್ಲ ತಾನೆ?
- ನನ್ನ ಬಗ್ಗೆ ನೀನು ಹೀಗೆ ಸುಳ್ಳು ಹೇಳುತ್ತಲೇ ಇದ್ದರೆ ನಾನು ನಿನ್ನ ಬಗ್ಗೆ ನಿಜವನ್ನೇ ಹೇಳಬೇಕಾಗಿ ಬರುತ್ತದೆ.
- Sports do not build character, they reveal it.
- ಬಾಯಿನಲ್ಲಿ ಕೋಡಬಳೆ, ಕೈನಲ್ಲಿ ಕಾಫಿ, ಹಿನ್ನೆಲೆಯಲ್ಲಿ ಸಂಗೀತ, ಸಮಯ ಕಳೆಯಲು ಪದಬಂಧ. ಸುಖ ಎಂದರೆ ಇದೇ ಎಂದು ನಾನೆಂದುಕೊಂಡಿದ್ದೇನೆ, ಆದರೆ ಅನುಭವಿಸಲು ಆಗಿಲ್ಲ ಅಷ್ಟೇ.
- 'ಇನ್ನೊಂದು ಆರು ತಿಂಗಳು ಬಿಟ್ಟುಕೊಂಡು ಬನ್ನಿ' ಎಂದಾಗ 'ಬೆಳಿಗ್ಗೆ ಬರಲೋ ಸಾಯಂಕಾಲ ಬರಲೋ' ಎಂದು ಕೇಳಿದವನು ವಿಮಾ ಏಜೆಂಟೇ ಆಗಿರುತ್ತಾನೆ.
- ಇದೊಂದು ಮುಕ್ತ ಪ್ರಪಂಚ. ನಮ್ಮ ವಿಷವನ್ನು ನಾವೇ ಆಯ್ದುಕೊಳ್ಳಲು ನಾವು ಸರ್ವ ಸ್ವತಂತ್ರರು.
- The biggest flaw in anyone is not to understand his own weakness and live in its denial.
- ಸ್ಪರ್ಧೆಗಳಲ್ಲಿ ಗೆಲುವೇ ಎಲ್ಲ ಅಲ್ಲ ಎನ್ನುವುದಾದರೆ ಸ್ಕೋರ್ ಯಾಕೆ ಬೇಕು?
- When you come to see you are not as wise today as thought you were yesterday, you are wiser today.
- ಎಸ್‌ಎಂಎಸ್‌ಗೆ ಹೋದ ಮಾನ ನಂತರ ಕಾಲ್ ಮಾಡಿದರೂ ಸಿಗೊಲ್ಲ.
- One man's pulp is another man's great literature.
- 'ದೋಸ್ತಾನಾ' ಚಿತ್ರ ಹಾರರ್ ಕತೆ ಆಗಿದ್ದರೆ ಅದನ್ನು 'ಘೋಸ್ಟಾನಾ' ಎಂದು ಕರೆಯಬಹುದಿತ್ತು.
- There is no fool like an old fool except a born fool.
- These errors are correct ಎಂದರೆ ಏನರ್ಥ?
- ಕಾಲು ಮುರಿದುಕೊಂಡ ಕಪ್ಪೆ unhoppy ಅಲ್ವ?

ವಕ್ರ ಪದಬಂಧ - 2

- ಎನ್. ರಾಮನಾಥ್



ಎಡದಿಂದ ಬಲಕ್ಕೆ

1. ಕಂದಮೂಲ (4)
3. ಮನಕ್ಕೆ ತೋಚಿದ ರಾಗ (3)
5. ಸರ್ಕಾರಕ್ಕೆ ಸೇರಿದಾಕ್ಷಣ ಇದು ಸಿಗುವುದಂತೆ (3)
6. ಕ್ವಿಜ್ ಕಾರ್ಯಕ್ರಮ (6)
9. ಫೋನೆತ್ತಿದಾಕ್ಷಣ ಹೇಳುವುದು ತಿರುಗಿದೆ (2)
10. ಅನರ್ಥಕೋಶದ ಕರ್ತೃ (2)
12. ಪರ ಆಕ್ರಮಕ್ಕೆ ಇದು ಇನ್ನೊಂದು ಪದ (3)
13. ಶೌಚಾಲಯಕ್ಕೆ ಹೀಗೂ ಅನ್ನಬಹುದೇ? (6)
16. ಅಕ್ಕಪಕ್ಕದ ರಾಜ್ಯಗಳ ತಿಚಿಡಿಗೆ ಕಾರಣವಾದುದು (2)
17. ಇನಿಯನು ಕತ್ತೆಯೂ ಹೌದು (3)
19. ಇದು ಒಡೆದರೆ ಒಂದೇ ಕಾಸಂತೆ (3)
20. ಮುಖದಲ್ಲೂ ಇದೆ, ಹೋಟೆಲ್‌ನಲ್ಲೂ ಇದೆ (2)

ಮೇಲಿನಿಂದ ಕೆಳಕ್ಕೆ

1. ರಸಹೀನ ವ್ಯಕ್ತಿ (3)
2. ಹಚ್ಚೆ ಹಾಕಿಸಿಕೊಂಡ ಮೊಟ್ಟಮೊದಲ ಪ್ರಾಣಿ (3)
3. ಸಕಾರ ಹೊಂದಿದ ಅಮಲಿನ ವಸ್ತು (3)
4. ತಲೆ ಚಚ್ಚಿಕೊಳ್ಳುತ್ತಾ ಜ್ಞಾಪಿಸಿಕೊಳ್ಳುವ ದೇವ (2)
5. ಸ್ವತಂತ್ರಕ್ಕೂ ಪರತಂತ್ರಕ್ಕೂ ನಡುವಣ ಲಗ್ನ (3)
7. ಪ್ರತಿ ಕೇಸಿನ ಜೀವಾಳಗಳು (6)
8. ಗಟ್ಟಿಯಿಲ್ಲದ ಹೊಟ್ಟೆ ರೋಗವೂ ಹೌದು (4)
10. ಹಿಟ್ಟಿನ, ಸಂಗೀತದ ಹದಕ್ಕೆ ಬೇಕಾದ್ದು (2)
11. ಪ್ರಾಣಸಂಖ್ಯಾ ನಿಯಂತ್ರಕ (3)
12. ಹಳಬರ ನೆಚ್ಚಿನ ಬಿರುನುಡಿ (3)
14. ಅನ್ನಕ್ಕೆ ಬೇಕಾದ ಇದಕ್ಕೆ ಒಂದು ಸಂಸ್ಥೆಯೇ ಇದೆ (3)
15. ಹಿಂದಿಯವನು ನೂರು ಹೊಡೆದುದರ ಸದ್ದು (3)
18. ತಿರುಗಿನಿಂತ ಗುಂಪು (2)

ಹುರುಳಿ ಕಟ್ಟು.....

ನಿನ್ನ ಎದೆಯೊಳದಲಿ .....

- ಎಚ್.ಗೋಪಾಲಕೃಷ್ಣ

ಮನೆ ಸುತ್ತ ಮುತ್ತಾ ಓಡಾಡುತ್ತಿದ್ದ ಹೊಂಬಣ್ಣದ ಬೆಕ್ಕು ಅದು ಹೇಗೋ ನಮಗೆ ತುಂಬಾ ಆಪ್ತವಾಗಿಬಿಟ್ಟಿತು. ಅದು ಬಂದು ಬಾಗಿಲಿನಲಿ ನಿಂತು ಮಿಯಾಂವ್ ಅಂದಾಗ ಅದಕ್ಕೆ ಹಾಲು ಹಾಕಲು ಶುರುಮಾಡಿದೆವು. ಬೆಳಿಗ್ಗೆ ತಿಂಡಿ ಸಮಯಕ್ಕೆ ಬಂದರೆ ಒಳಗಡೆಯಿಂದ ಬಿಸ್ಕತ್ತು, ಬ್ರೆಡ್ಡು ತಂದು ಮಗಳು ಅದಕ್ಕೆ ಹಾಕುತ್ತಿದ್ದಳು. ಅದು ಆಟವಾಡುತ್ತಾ ತಿನ್ನುವುದನ್ನು ಸಂತೋಷದಿಂದ ನೋಡುತ್ತಾ ನಿಲ್ಲುತ್ತಿದ್ದೆವು. ಆಗಾಗ್ಗೆ ಅದು ಬಂದು ನನ್ನವಳ ಪಕ್ಕ ನಿಂತು ಅದರ ಮೈ ಉಜ್ಜಿಕೊಳ್ಳುವುದು, ಮೀಸೆಯಲ್ಲೆ ನಕ್ಕಂತೆ ಮಾಡುವುದನ್ನು ನೋಡಿದಾಗ ಹೀನ ಓಡಿಸೇ ನಿನ್ನನ್ನ ತಬ್ಬುತ್ತೆ ನೋಡು ಅದು ಅಂತ ರೇಗಿದ್ದೆ. ಹೆಂಡತಿ ಕಂಗಣ್ಣು ಬಿಟ್ಟು ಅದು ಬೆಕ್ಕೊ ಅನ್ನೋದು ನೆನಪಿದೆ ತಾನೇ? ನಿಮ್ಮ ಯೋಚನೆ ಆಹಾ.... ಅಂತ ಕತ್ತು ಕೊಂಕಿಸಿದ್ದಳು.

ಅದು ಹೇಗೋ ನನಗೂ ಅದು ಹಚ್ಚಿಕ್ಕೊಂಡಿತು. ಒಂದು ಸಲ ಎಲ್ಲಿಂದಲೋ ಒಂದು ಜೀವಂತ ಇಲಿಯನ್ನ ಹಿಡಿದುಕೊಂಡು ಇದು ಬಂದು ಅದನ್ನ ನೆಲದ ಮೇಲೆ ಹಾಕಿ ಆಟ ಆಡಿತು ನೋಡೀ ಅವತ್ತೇ ನನಗೆ ಇಲೀಗೆ ಪ್ರಾಣ ಸಂಕಟ ಬೆಕ್ಕಿಗೆ ಚೆಲ್ಲಾಟ ಎಂಬ ಮಾತಿನ ಅರ್ಥ ಪೂರ್ಣವಾಗಿ ತಿಳಿದದ್ದು. ಒಂದು ದಿನ ಈ ಬೆಕ್ಕು ಹೀಗೇ ಬಂದು ನಿಂತಾಗ ಮನೆಗೆ ಬಂದಿದ್ದ ಗೆಳೆಯರು ಅದನ್ನ ನೋಡಿದರು. ಗಬ್ಬ ಆಗಿದೇರೀ ಮರಿ ಹಾಕುತ್ತೆ ಇಷ್ಟರಲ್ಲೇ... ಅಂತ ಹೇಳಿದರು. ಬೆಕ್ಕು ಗಬ್ಬ ಆಗಿರುವ ಪ್ರಾಥಮಿಕ ಜ್ಞಾನವೂ ನಮಗೆ ಏಕೆ ತಿಳೀಲಿಲ್ಲ ಅಂತ ಅವರೆದುರಿಗೇ ಪೇಚಾಡಿದ್ದೆ. ಇದುವರೆಗೂ ಬೆಕ್ಕನ್ನ ಸಾಕಿಲ್ಲವೇ ನೀವು ಅದಕ್ಕೇ ಗೊತ್ತಾಗಿಲ್ಲ, ಮುಂದಿನ ಸಲ ತುಂಬಾ ಸುಲಭವಾಗಿ ಗೊತ್ತಾಗುತ್ತೆ ಬಿಡೀ ಅಂತ ಸಮಾಧಾನಪಡಿಸಿದ್ದರು. ಅದಾದ ಒಂದು ವಾರಕ್ಕೋ ಏನೋ ನಮ್ಮ ಮನೆಯ ಮುಂದಿನ ಮೋರಿಯ ಕಲ್ಲಿನ ಕೆಳಗೆ ಬೆಕ್ಕು ಮರಿ ಹಾಕಿರೋದು ಅಲ್ಲಿಂದ ಹೊರಬರಿತ್ತಿದ್ದ ಮರಿಗಳ ಮಿಯಾಂವ್ ಶಬ್ದದಿಂದ ತಿಳೀತು. ಒಂದೆರೆಡು ಘಂಟೆಯಲ್ಲಿಯೇ ತಾಯಿ ಬೆಕ್ಕು ಐದು ಮರಿಗಳನ್ನು ನಮ್ಮ ಮನೆ ಒಳಗೆ ನಮ್ಮ ಅರಿವೇ ಇಲ್ಲದ ಹಾಗೆ ಸಾಗಿಸಿಬಿಟ್ಟಿತ್ತು.

ಐದು ಹೊಂಬಣ್ಣದ ಮಧ್ಯೆ ಮಧ್ಯೆ ಕಂದು ಪಟ್ಟೆಯಿದ್ದ ಪುಟಾಣಿ ಮರಿಗಳು. ಅವು ಕಣ್ಣು ಬಿಡೋದು,ಅಮ್ಮನ ಹತ್ತಿರ ಹಾಲಿಗೆ ತವಕಾಡೋದು, ಮೈ ಎಳೆದುಕೊಂಡು ಒಂದರ ಮೇಲೆ ಒಂದು ಬಿದ್ದು ಒದ್ದಾಡೋದೂ... ಆಹಾ ಎಂಥಹ ಸಂತೋಷ ಕೊಡ್ತಾ ಇತ್ತೂ ಅಂತೀರೀ... ಇಷ್ಟು ದಿವಸ ಬೆಕ್ಕು ಸಾಕದೇ ಎಂಥಹ ಸಂತೋಷ ಕಳೆದುಕೊಂಡೆವಲ್ಲಾ ಅಂತ ಅನಿಸಿಬಿಟ್ಟಿತ್ತು. ಈ ನಡುವೆ ತಾಯಿ ಬೆಕ್ಕು ಎರಡು ಮರೀನ ತಿಂದು ಬಿಟ್ಟಿತ್ತು. ಸರ್ವೈವಲ್ ಆಫ್ ದಿ ಫಿಟ್ಟೆಸ್ಟ್ ಥಿಯರಿಯನ್ನ ನನ್ನ ಗೆಳೆಯ ಹೇಳಿದ್ದ. ಬೆಳೆದ ಮೇಲೆ ತನ್ನನ್ನು ತಾನು ನೋಡಿಕೊಳ್ಳಲು

ಆಗಬಿರುವ ಮರಿಗಳನ್ನು ತಾಯಿ ಬೆಕ್ಕು ಚಿಕ್ಕದಿರಬೇಕಾದರೇನೇ ನುಂಗಿಬಿಟ್ಟು ಮುಂದೆ ಅದು ಜೀವನದಲ್ಲಿ ಪಡಬೇಕಾದ ಪಾಡನ್ನು ತಪ್ಪಿಸಿಬಿಡುತ್ತೆ ಅಂತ. ಥಿಯರಿ ನಿಜವೋ ಸುಳ್ಳೋ ತಿಳೀದು, ಆದರೆ ಅದು ನುಂಗಿದ ಎರಡೂ ಮರಿಗಳೂ ಮಿಕ್ಕವುಗಳಿಗಿಂತಲೂ ಪೀಚು ಪೀಚಾಗಿದ್ದು ನಿಜ. ನಮ್ಮಜ್ಜಿ ನಾವು ತುಂಬಾ ಚಿಕ್ಕವರಿದ್ದಾಗ ಹೇಳುತ್ತಿದ್ದ ಮತ್ತೊಂದು ಮಾತೂ ನೆನಪಿಗೆ ಬಂತು - ಬೆಕ್ಕು ಈ ಮನೇಲಿ ಮಕ್ಕಳು ಹುಟ್ಟದಿರಲಿ ಅಂತ ಕೇಳಿಕೊಳ್ಳುತ್ತವೆ- ಮನೇಲಿ ಮಕ್ಕಳು ಹುಟ್ಟಿದರೆ ಅದಕ್ಕೆ ಹಾಲು ಕಡಿಮೆ ಆಗುತ್ತೆ ಅಥವಾ ಸಿಕ್ಕೋದೇ ಇಲ್ಲಾ ಅಂತ... ಅಬ್ಬಾ ಎಂಥಹ ದಿವಿನಾದ ಯೋಚನೆ ಅಂತ ಅನಿಸಿತ್ತು.

ಮನೇಗೆ ಬರುತ್ತಿದ್ದ ನೆಂಟರು ಬೆಳಿಗ್ಗೆ ಬೆಳಿಗ್ಗೆ ಇದರ ಅನಿಷ್ಟ ಮುಖ ನೋಡ್ತೀಯೇನೋ ದಿನಾ ಪೂರ್ತಿ ಹೇಗೆ ಕಳೀತೀಯೋ ಅಂತಲೂ ಮುಖ ಸಿಂದರಿಸುತ್ತಿದ್ದರು.

ಮರಿಗಳು ಬೆಳೆದೊ. ಒಂದೂವರೆ ತಿಂಗಳಾದವೋ. ತಾಯಿ ಬೆಕ್ಕು ಒಂದು ದಿನ ಆಚೆ ಹೋಗಿದ್ದು ಮನೇಗೆ ಬರಲೇ ಇಲ್ಲ! ಹುಡುಕಿದರೆ ಸಿಗಲಿಲ್ಲ. ಎರಡು ಮೂರು ದಿವಸವಾದ ಮೇಲೆ ಮನೇಗೆ ಹಾಲು ಹಾಕುತ್ತಿದ್ದ ಹತ್ತಿರದ ಹಳ್ಳಿಯವಳು ನಿಮ್ಮ ಬೆಕ್ಕೇ ಇರಬೋದೇನೋ ನಾಯಿ ಕಚ್ಚಿಕೊಂಡು ಓದಂಗಿತ್ತು.. ಅಂತ ಹೇಳಿದಳು. ಪಾಪ ಬೆಕ್ಕಿನ ಮರಿಗಳು ಈ ವಯಸ್ಸಿಗೇ ಅನಾಥವಾದವು ಅಂತ ಬೇಜಾರಾಯಿತು. ಎರಡು ಮೂರು ದಿವಸ ಅಮ್ಮನಿಗೆ ಅಂತ ಮರಿ ಬೆಕ್ಕುಗಳು ತವಕದಿಂದ ಕಾಯೋದೂ ಹಸಿದಾಗ ಕೊಂಯ್ ಕೊಂಯ್ ಅಂತ ಕಿರಲೋದೂ ಮಾಡಿದವು. ಚಿಪ್ಪಿನಲ್ಲಿ ಹಾಲು ಸುರಿದರೆ ಅದನ್ನ ಕುಡಿಯೋದೂ ಕಲಿತವು. ನಿಧಾನಕ್ಕೆ ಮನೆ ಹಿಂದಿನ ಮರ ಹತ್ತೋದೋ ಅಲ್ಲಿಂದ ಕೆಳಕ್ಕೆ ಜಿಗಿಯೋದೋ ಕಲಿತು ಅದನ್ನ ನಮಗೆ ತೋರಿಸಿ ಖುಷಿ ಕೊಡ್ತಾ ಇದ್ದವು.

ಹೀಗೇ ಮುಂದುವರೆದಿದ್ದರೆ ಈ ಪ್ರಸಂಗವನ್ನು ತಮಗೆ ವಿವರಿಸದೇ ತೆಪ್ಪಗೆ ಇದ್ದು ಬಿಡಬಹುದಾಗಿತ್ತು. ಆದರೇನಾಯಿತು-ಗೊತ್ತಾ?

ಮೂರು ಮರಿಗಳು ನಮ್ಮ ಮನೆಯ ಕಾಂಪೌಂಡಿನಲ್ಲಿ ಆಟವಾಡುವುದನ್ನು ಸುತ್ತ ಮುತ್ತ ಓಡಾಡುತ್ತಿದ್ದ ಹುಡುಗರು ಗಮನಿಸುತ್ತಿದ್ದರು. ಬೆಕ್ಕು ಕದೀತರೇನೋ ಅನ್ನುವ ತವಕ ನಮಗೆ. ಒಂದು ದಿವಸ ನಿಲ್ಲಿಸಿ ಕೇಳಿದೆ. ಇಲ್ಲಾ ಸಾರ್ ಮುದ್ದಾಗಿವೆ ನಮಗೆ ಕೊಡಿ ಸಾಕ್ಕೋತ್ತೀವಿ ಅಂದವು. ತಲೆಯಾಡಿಸಿ ಕಳಿಸಿದೆ. ಇದಾದ ಎರಡು ದಿವಸದಲ್ಲಿ ಡುಮ್ಮಡುಮ್ಮಗೆ ಬೆಳೆದಿದ್ದ ಬೆಕ್ಕು ಕಾಣೆಯಾಗಿಬಿಟ್ಟಿತು. ನಾಲ್ಕು ಐದು ದಿವಸ ಹುಡುಕಿದರೂ ಸಿಗಲಿಲ್ಲ. ಎಲ್ಲಿ ಹೋಯಿತು ಅಂತ ಚಿಂತೆ ಹತ್ತಿಸಿಕೊಂಡು ಕೊರಗಿದ್ದೇ ಬಂತು. ಈ ನಡುವೆ ಮನೆಗೆ ಬಂದಿದ್ದ ಗೆಳೆಯರೊಬ್ಬರು ಬೆಕ್ಕನ್ನ ಕೆಲವರು ತಿನ್ತಾರೆ ಅಂತ ಹೇಳಿ ಭಯ ಹೆಚ್ಚಿಸಿದ್ದರು. ಯಾರೋ ಕೊಂದು ತಿನ್ನಲು ನಾವೇಕೆ ಇವನ್ನ ಸಾಕಬೇಕು ಅಂತ ಕೋಪ ಬಂದಿತ್ತು. ಅದು ಹೇಗೆ ಇಷ್ಟು ಮುದ್ದಾಗಿರೋ ಪ್ರಾಣಿಗಳನ್ನ ತಿನ್ತಾರೆ ಅಂತಲೂ ಅನಿಸಿತ್ತು. ಈ ಬೆಕ್ಕು ಕಾಣೆಯಾದಾಗ ಮಿಕ್ಕವು ಎರಡು ಎರಡು-ಮೂರು ದಿವಸ ಹಾಲು ಬಿಟ್ಟವು, ಮನೆ ಹಿತ್ತಲಿನ ಮರ ಹತ್ತೋದು

ನಿಲ್ಲಿಸಿದವು ಮತ್ತು ಮೂಲೆ ಮೂಲೆ ಹುಡುಕುತ್ತಿದ್ದವು. ಪಾಪ ಜತೆಯಲ್ಲಿದ್ದ ಮತ್ತೊಂದು ಬೆಕ್ಕಿಗೆ ಪರದಾಡುತ್ತಿವೆ ಅನಿಸಿತು.

ಮನೆಯಲ್ಲಿನ ಬೆಕ್ಕನ್ನ ನೋಡಿ ಬೀದಿ ನಾಯಿಗಳು ಬಂದು ನಿಂತು ಹೊಂಚು ಹಾಕುವುದನ್ನು ಆಗಾಗ ನೋಡುತ್ತಿದ್ದ ನಾವು ಬೀದಿ ನಾಯಿಗಳನ್ನ ಕಂಡಕೂಡಲೇ ಓಡಿಸುತ್ತಿದ್ದೆವು. ಅದು ಹೇಗೋ ಒಂದು ದಿನ ನಮ್ಮ ಕಣ್ಣು ತಪ್ಪಿ ಸಿ ಎರಡು ಬೀದಿ ನಾಯಿಗಳು ಹಿತ್ತಲಿಗೆ ಬಂದಿವೆ. ಆಡುತ್ತಿದ್ದ ಬೆಕ್ಕಿನ ಮರಿಗಳ ಮೇಲೆ ಎರಗಿವೆ. ಚೋಟಿ ಬೆಕ್ಕು ಮರ ಏರಿ ತಪ್ಪಿ ಸಿಕೊಂಡಿತು. ಮತ್ತೊಂದನ್ನ ಅವು ಕಚ್ಚಿಕೊಂಡು ಎಳೆದೊಯ್ದವಂತೆ. ಮನೇಗೆ ಬಂದ ಮೇಲೆ ನನ್ನಾಕೆ ಈ ಸುದ್ದಿಯನ್ನ ಅಳೂವಿನ ನಡುವೆ ತಿಳಿಸಿದಳು.

ಉಳಿದಿರುವ ಬೆಕ್ಕನ್ನ ಜೋಪಾನವಾಗಿ ಕಾಪಾಡಬೇಕು ಅಂತ ನಿರ್ಧಾರ ತೆಗೆದುಕೊಂಡೆವು...!

ನಮ್ಮ ನಿರ್ಧಾರ ಎರಡೇ ದಿನಕ್ಕೆ ಹಾರಿಹೋಯಿತು. ಜೀವ ಉಳಿದಿದ್ದ ಬೆಕ್ಕು ಜತೆಗಾರ ಬೆಕ್ಕನ್ನ ನಾಯಿಗಳು ಕಚ್ಚಿ ಎಳೆದುಕೊಂಡು ಹೋಗಿದ್ದು ನೋಡಿ ಎಷ್ಟು ಹೆದರಿತ್ತು ಅಂದರೆ ಅದು ಅಟ್ಟ ಬಿಟ್ಟು ಕೆಳಗೆ ಬರೋದಿಕ್ಕೇ ಹಿಂದೇಟು ಹಾಕುತ್ತಿತ್ತು. ಹಾಲಿಟ್ಟರೆ ಕುಡೀದು, ಎದುರಿಗೇ ಇಲಿ ಹೋದರೂ ನಡುಗೋದೂ.. ಯಾವಾಗಲೂ ಭಯ.. ಎರಡು ದಿವಸ ಸರಿಹೋಗುತ್ತೆ ಅಂತ ಕಾದೆವು. ಮೂರನೇ ದಿವಸ ಅಟ್ಟದಿಂದ ಸಿಬಿರ್ ಸಿಬಿರ್ ಅಂಬುವ ಶಬ್ದ ಬಂತು ಅಂತ ಆಚೆ ಬಂದು ನಿಂತು ನೋಡ್ತೀವಿ...ಅದೇನು ಆಶ್ಚರ್ಯ ಅನ್ನುತ್ತೀರೀ?

ಅಟ್ಟದ ಕೆಳಗಡೆ ಒಂದು ಬೀದಿ ನಾಯಿ ನಿಂತಿದೆ. ಅಟ್ಟದ ಮೇಲಿನಿಂದ ಈ ಬೆಕ್ಕು ಅದನ್ನ ಹೆದರಿಸುತ್ತಾ ಇದೆ. ಈ ಬೀದಿನಾಯಿ ಒಂದೊಂದು ಸಲ ಅದು ಸಿಬಿರ್ ಅಂದಾಗಲೂ ಎರಡು ಹೆಜ್ಜೆ ಹಿಂದೆ ಹಾಕಿ ಬಾಲವನ್ನು ಹಿಂಗಾಲಿನ ಹಿಂದಕ್ಕೆ ಸರಿಸುತ್ತಾ ಇದೆ.....

ಬೆಕ್ಕಿಗೆ ಬದುಕುವ ಛಲ ಮೂಡುತ್ತಿದೆ ಅಂತ ಸಂತೋಷವಾಯಿತು. ಎರಡೇ ವಾರಕ್ಕೆ ಬೆಕ್ಕು ಎಂಥಹ ಪೌರುಷ ರೂಢಿಸಿಕೊಂಡಿತು ಅಂದರೆ ಇದರ ಆರ್ಭಟಕ್ಕೆ ಬೀದಿ ನಾಯಿಗಳು ಇದರ ಬಳಿ ಬರಲು ಹೆದರಿಬಿಟ್ಟವು !

ಈ ಪ್ರಸಂಗ ನಡೆದು ಅದೆಷ್ಟೋ ವರ್ಷಗಳೇ ಕಳೆದು ಹೋಗಿದೆ. ಈಗ ಬೆಕ್ಕೂ ಇಲ್ಲ: ಈ ಬೆಕ್ಕಿನ ಕಥೆಯಾದ ಮೇಲೆ ಮತ್ಯಾವ ಪ್ರಾಣಿಯನ್ನೂ ಸಾಕಬಾರದು ಅಂತ ತೀರ್ಮಾನಿಸಿಬಿಟ್ಟಿದ್ದೆವು. ಆದರೂ ಈಗಲೂ ಅವತ್ತು ಬೆಕ್ಕು ಸಟೆದು ನಿಂತು ನಾಯಿಯನ್ನು ಓಡಿಸಿದ ದೃಶ್ಯ ಕಣ್ಣಿಗೆ ಕಟ್ಟಿದ ಹಾಗೆ ಎದುರು ಮೂಡುತ್ತದೆ. ಆಪತ್ಕಾಲದಲ್ಲಿ ಕಷ್ಟಗಳನ್ನು ಎದುರಿಸಿ ನಿಲ್ಲುವ ಚೈತನ್ಯವನ್ನು ರೂಢಿಸಿಕೊಳ್ಳಬೇಕು ಎಂಬ ವಾಕ್ಯಾರ್ಥವನ್ನು ಸೂಚಿಸಲು ಸುಮಾರು ಹುಡುಗರಿಗೆ ಈ ಕಥೆಯನ್ನು ಹೇಳೀದೀನಿ.. ಈಗ ತಮಗೂ....

ಎಲ್ಲಾ ವೇಸ್ಟಾಯ್ತಲ್ಲಪ್ಪಾ!

- ಜಿ.ವಿ. ಗಣೇಶಯ್ಯ

ನನ್ನ ಮಗಳು ಚಿಕ್ಕವಳಿದ್ದಾಗಿನ ಕತೆ ಇದು.

ನನ್ನ ಷಡ್ಡಕರು ನಮ್ಮ ಮನೆಗೆ ಬರುತ್ತೇನೆಂದು ಫೋನ್ ಮಾಡಿದ್ದರು. ನಮ್ಮ ಮನೆಯಿಂದ ಅವರ ಮನೆಗೆ ಎರಡು ಕಿಲೋ ಮೀಟರು ಇರಬಹುದು ಅಷ್ಟೇ.

ನನ್ನ ಮಗಳಿಗೆ ಸಡಗರಕ್ಕಿಂತ ಆತಂಕ. ಏಕೆಂದರೆ ನನ್ನ ಷಡ್ಡಕರು ಬಹಳ ಸ್ಟ್ರಿಕ್ಟು. ಅವರ ಮನೆ ಬಹಳ ಅಚ್ಚುಕಟ್ಟು, ಕ್ಲೀನು. ಯಾವು ಯಾವುದು ಎಲ್ಲೆಲ್ಲಿ ಇರಬೇಕೋ, ಹೇಗೆ ಹೇಗೆ ಇರಬೇಕೋ ಅಲ್ಲಲ್ಲೇ ಹಾಗೆ ಹಾಗೆಯೇ ಇರಬೇಕು. ಒಂದು ಚೂರು ಹಿಂಚು ಮುಂಚಾದರೂ ಅವರು ಸಹಿಸುತ್ತಿರಲಿಲ್ಲ.

ನನ್ನ ಮಗಳಿಗೆ ಇದೇ ತಲೆ ಬಿಸಿ. ಬೆಳಿಗ್ಗೆಯಿಂದ ಪ್ರಾರಂಭಿಸಿದ್ದಳು. ಗುಡಿಸುವುದು, ಸಾರಿಸುವುದು, ಒರೆಸುವುದು, ಜೇಡರ ಬಲೆ ತೆಗೆಯುವುದು, ಟಿವಿ, ಫ್ರಿಜ್, ಪೀಠೋಪಕರಣಗಳ ಮೇಲೆ ಎಷ್ಟೋ ದಿನಗಳಿಂದ ವಾಸವಾಗಿದ್ದ ಧೂಳು ಒರೆಸುವುದು- ಹೀಗೆ ಮನೆಯನ್ನು ಶುಭ್ರಗೊಳಿಸಿದ್ದೇ ಗೊಳಿಸಿದ್ದು. ಎಲ್ಲ ಪದಾರ್ಥಗಳನ್ನೂ ನೀಟಾಗಿ ಜೋಡಿಸಿದಳು.

ಅವಳ ಸಡಗರವನ್ನು ನೋಡಿ ನನಗೆ ಸಂತೋಷವಾಯಿತು. ಹಾಗೆಯೇ "ಈ ಷಡ್ಡಕರು ವಾರದಲ್ಲಿ 3-4 ದಿನವಾದರೂ ನಮ್ಮ ಮನೆಗೆ ಭೇಟಿಕೊಡುವ ಕಾರ್ಯಕ್ರಮವನ್ನು ಹಾಕಿಕೊಂಡರೆ ನಮ್ಮ ಮನೆ ಸದಾ ನಳನಳಿಸುತ್ತಿರುತ್ತದಲ್ಲಾ" ಅಂತಲೂ ಅನ್ನಿಸಿತು.

ಮನೆ ಎಲ್ಲ ನೀಟಾದ ಹಾಗೆ ಅನ್ನಿಸಿತು. ಎದುರುಗಡೆ ವರಾಂಡದಲ್ಲಿ ಟೀಪಾಯಿ, ಕುರ್ಚಿಗಳನ್ನೆಲ್ಲಾ ನನ್ನ ಮಗಳು ನೀಟಾಗಿ ಜೋಡಿಸಿಟ್ಟಳು. ಮೂಲೆ ಸ್ಟ್ಯಾಂಡಿನ ಮೇಲೆ ಹೂಕುಂಡ ರಾರಾಜಿಸುತ್ತಿತ್ತು. ಟೀಪಾಯಿಯ ಮೇಲೆ ಅಂದಿನ ದಿನಪತ್ರಿಕೆಯು "ಯಾರಾದರೂ ಓದಲಿ" ಅಂತ ಕಾಯುತ್ತಿತ್ತು. ಮಂತ್ರಿಗಳು ಬರುತ್ತಾರೆ ಅಂತಾದಾಗ ಸರ್ಕಾರೀ ಕಛೇರಿಗಳೂ ಹೀಗೆಯೇ - ತಾತ್ಕಾಲಿಕವಾಗಿ ಕಂಗೊಳಿಸುತ್ತಿರುತ್ತವಲ್ಲವೇ? ಒಟ್ಟಿನಲ್ಲಿ ಮನೆ ಪೂರ್ಣ ಒಪ್ಪ-ಓರಣದಿಂದ ಕಂಗೊಳಿಸುತ್ತಿತ್ತು. ಷಡ್ಡಕರ ಬರುವಿಕೆಗಾಗಿ ಕಾಯುತ್ತಿತ್ತು.

ಸುಮಾರು ಬೆಳಿಗ್ಗೆ ಹತ್ತೂವರೆಯ ಹೊತ್ತಿಗೆ ಮನೆಯ ಫೋನ್ ರಿಂಗಣಿಸಿತು. ನನ್ನ ಮಗಳೇ ರಿಸೀವರ್ ಎತ್ತಿಕೊಂಡಳು. "ಹೇಳಿ ಚಿಕ್ಕಪ್ಪ" ಅಂದಳು ಅಷ್ಟೇ, ಅವಳ ಮುಖದ ಮೇಲೆ ತೀವ್ರ ನಿರಾಸೆಯ ಕಾರ್ಮೋಡ ಆವರಿಸಿಕೊಂಡಹಾಗೆ ಕಾಣಿಸಿತು. ಅವಳ ಉತ್ಸಾಹ ಕುಂದಿದೆ ಅಂತ ನನಗನ್ನಿಸಿತು.

ಫೋನ್ ಕೆಳಗಿಟ್ಟು ಮಗಳು ಹೇಳಿದ್ದಿಷ್ಟು: "ಅಪ್ಪಾ, ನಾನು ಇಷ್ಟೆಲ್ಲಾ ಕಷ್ಟಪಟ್ಟು ಮನೇನ ನೀಟ್ ಮಾಡಿದ್ದು ವೇಸ್ಟಾಗ್ಹೋಯ್ತುಪ್ಪಾ."

ನನಗೊಂದೂ ಅರ್ಥವಾಗಲಿಲ್ಲ, "ವೇಸ್ಟ್ ಯಾಕಾಯ್ತೇ ಪುಟ್ಟೀ?!" ಅಂತ ಅಚ್ಚರಿಯಿಂದ ಕೇಳಿದೆ.

"ವೇಸ್ಟಾಗದೇ ಇನ್ನೇನಪ್ಪಾ? ಚಿಕ್ಕಪ್ಪನ ಮನೆಗೆ ಬೆಂಗ್ಳೂರಿಂದ ಯಾರೋ ಗೆಸ್ಟ್ ಬರ್ತಿದಾರಂತೆ. ಹಾಗಾಗಿ ಅವ್ರು ಇವತ್ತು ನಮ್ಮ ಮನೆಗೆ ಬರೊಲ್ಲವಂತೆ!" ಅಂದಳು.

ಕೋಪ ಬಂದಾಗ ನೋಡ್ಬೇಕು

- ಮಣಿ

"ನೀವೇನೇ ಹೇಳಿ ಸೀತಮ್ನೋರೇ ಆ ಕಾವೇರಮ್ನೋರಿಗೆ ಕೋಪ ಬಂದಾಗ ನೋಡ್ಬೇಕು" - ಅಂದ್ರು ಪಾತಮ್ನೋರು. ಅಲ್ಲೇ ನನ್ಗೆ ಹುಟ್ಕೊಂಡಿದ್ದು - ಯೋಚ್ನೆ.

ಕಾವೇರಮ್ನೋರಿಗೆ ಕೋಪ ಬಂದಾಗ ನೋಡ್ಬೇಕು - ಅದ್ಸರಿ. ಆದ್ರೇ - ಏನು ನೋಡ್ಬೇಕು? ಯಾರನ್ನ ನೋಡ್ಬೇಕು? ಕಾವೇರಮ್ನೋರ್ನ ನೋಡ್ಬೇಕೆ? - ಅವರ ಕೋಪವನ್ನ ನೋಡ್ಬೇಕೆ? - ಅದು ಕಾಣುತ್ತೇ? - ಹೋಗ್ಲಿ ಸೀತಮ್ನೋರ್ನೇ ನೋಡ್ಬೇಕೆ? - ಇಲ್ಲ ಪಾತಮ್ನೋರ್ನೇ ನೋಡ್ಬೇಕೆ? ಅದೂ ಹಾಗಿರ್ಲಿ - ಕಾವೇರಮ್ನೋರಿಗೆ ಮಾತ್ರ ಕೋಪ ಬರುತ್ತೇ? - ಬೇರೆ ಯಾವ ಅಮ್ನೋರಿಗೂ ಕೋಪ ಬರೋಲ್ವೇ? ಅವುಗಳನ್ನ ನೋಡ್ಬಾರ್ದೇ?

ಇವುಗಳ ಜೊತೆಗೆ ಇನ್ನೂ ಕೆಲವು ಸಂದೇಹಗಳೂ ಬಂದ್ವು.

"ಕೋಪ" - ಅಂದ್ರೆ ಏನು? - ಅದು ಹೇಗಿರುತ್ತೆ? ಕಣ್ಣಿಗೆ ಕಾಣುತ್ತೇ? - ಅದು ಬಂದಿದೆ ಅಂತ ಹೇಗೆ ಕಂಡು ಹಿಡಿಯೋದು?

ಅದರಲ್ಲಿ ಎಷ್ಟು ವಿಧ? - ಹೀಗೆ ಏನೇನೋ ಯೋಚನೆಗಳು.

"ಕೋಪ" ಅನ್ನೋದು ಕಣ್ಣಿಗೆ ಕಾಣೊಲ್ಲ. ಇಂಗ್ಲೀಷಿನಲ್ಲಿ "ಅಬ್ ಸ್ಟ್ರಾಕ್ ನೌನ್" ಅಂತಾರಲ್ಲಾ - ಹೀಗೆ. ಹಾಗಾದ್ರೆ ಕೋಪ ಬಂದಿದೆ ಅಂತ ಹೇಗೆ ಗೊತ್ತಾಗುತ್ತೆ? ಅದರ ಕ್ರಿಯೆಯಿಂದ - ಅದರಿಂದ ಒಬ್ಬ ವ್ಯಕ್ತಿಯ ಮೇಲೆ ಉಂಟಾಗುವ ಪರಿಣಾಮಗಳಿಂದ. - ಅವನ ಬಾಹ್ಯ ಬದಲಾವಣೆಗಳಿಂದ - ಗುಣ ಸ್ವಭಾವಗಳ ಬದಲಾವಣೆಯಿಂದ.

ಒಬ್ಬ ವ್ಯಕ್ತಿಗೆ ಕೋಪ ಬಂದಾಗ - ಅವನ ಕಣ್ಣು-ಕಿವಿ-ಮೂಗು-ಎಲ್ಲಾ ಕೆಂಪಗಾಗುತ್ತೆ. ಕೆಲವರಿಗೆ ಇಡೀ ಮುಖವೇ ಕೆಂಪಗಾಗುತ್ತೆ - ಶರೀರ ಕಂಪಿಸುತ್ತೆ - ತುಟಿ ಅದುರುತ್ತೆ - ಬಾಯಿ ಏನೇನೋ ಒದರುತ್ತೆ - ಇವು ಬಾಹ್ಯ ಬದಲಾವಣೆಗಳು.

ಇನ್ನು ಗುಣ ಸ್ವಭಾವಗಳ ಬದಲಾವಣೆಗಳು?

ಕೆಲವರಿಗೆ ಕೋಪ ಬಂದಾಗ ಗಟ್ಟಿಯಾಗಿ ಕಿರುಚುತ್ತಾರೆ. ಕೆಲವರು ಕೈಗಳನ್ನು ಎಲ್ಲಾ ದಿಕ್ಕುಗಳಿಗೂ ಆಡಿಸುತ್ತಾರೆ. ಅಲ್ಲಿಂದಿಲ್ಲಿಗೆ - ಇಲ್ಲಿಂದಲ್ಲಿಗೆ - "ಶತಪಥ" ಹಾಕುತ್ತಾರೆ. ಇವರು ಒಂದು ವಿಧವಾಗಿ - "ಕಥಕ್" - "ಕಥಕ್ಕಳಿ" - ನೃತ್ಯ ಪಟುವಿನ ಹಾಗೆ ಕಾಣುತ್ತಾರೆ. "ಲಾಂಗ್ ಜಂಪ್" - "ಹೈಜಂಪ್" - ಅಭ್ಯಾಸ ಮಾಡುತ್ತಿರುವ ಕ್ರೀಡಾಪಟುವಿನ ಹಾಗೂ ಕಾಣಬಹುದು. ಇನ್ನು ಕೆಲವರು ರೂಂ ಬಾಗಿಲು ಹಾಕ್ಕೊಂಡು - ರಗ್ಗು ಹೊದ್ಕೊಂಡು ಮೂಲೇಲಿ ಮಲಗಿ ಬಿಡ್ತಾರೆ - ಬಡ್ಕೊಂಡ್ರೂ ಬಾಯಿ ಬಿಡೊಲ್ಲ. ಜಾಗೃತ-ಸ್ವಪ್ನ-ಸುಷುಪ್ತಿ-ಯಾವ ಅವಸ್ಥೆಯೂ ಅಲ್ಲ. ಇದೇ ಒಂದು ವಿಶೇಷವಾದ (ದುರ್) ಅವಸ್ಥೆ. ಇವರ ಆ ಭಂಗಿ ಒಂದು ವಿಧವಾದ. "ಮೂಲಾಸನ" - "ಮೌನಾಸನ" - "ಮುಸುಕಾಸನ" - ಹಾಗೂ "ಮುದುರಾಸನ."

ಅಬಲ್ಲಿ - ಇವರಿಬ್ಬರ ಸಂಭಾಷಣೆ ಕೇಳಿ-

''ನೋಡಿ ಸೀತಮ್ನೋರೇ - ನಮ್ ಸೊಸೇಗೆ ಕೋಪ ಬಂದ್ರೆ ಊಟಾನೇ ಬಿಟ್ಟುಬಿಡ್ತಾಳೆ ಕಣ್ರೀ.''

''ಅಯ್ಯೋ! ಅವಷ್ಟೋ ಮೇಲು ಕಣ್ರೀ ಪಾತಮ್ನೋರೇ - ನಮ್ ಸೊಸೇಗೆ ಕೋಪ ಬಂದ್ರೆ ಒಂದಕ್ಕೆ ನಾಲ್ಕರಷ್ಟು ತಿಂದ್ಬಿಡ್ತಾಳೆ.''

ಕೆಲವರಿಗೆ ಕೋಪ ಬಂದ್ರೆ ಸುಮ್ ಸುಮ್ನೆ ತಲೆ ಕೆರಿಯೋದು - ಪೆನ್ಸಿಲ್ ಹೆರಿಯೋದು - ಕೈಗೆ ಸಿಕ್ಕಿದ ಪೇಪರ್‌ನೆಲ್ಲಾ ಹರಿಯೋದು - ಪದ್ಧತಿ.

ನನ್ನ ಮಿತ್ರನೊಬ್ಬನಿಗೆ ಒಂದು ವಿಚಿತ್ರ ಪದ್ಧತಿ. ಪೆನ್ನಿನ ಇಂಕ್‌ನೆಲ್ಲಾ ನೆಲದ ಮೇಲೆ ಕೊಡವೋದು. ಇದರಿಂದ ನೆಲದ ಮೇಲೆಲ್ಲಾ ಚಿತ್ರವಿಚಿತ್ರವಾದ ನವ್ಯಕಲೆ ಸೃಷ್ಟಿಯಾಗಿದೆ.

ನಮ್ಮ ಪೈಕಿ - ಸುಮಾರು ಇಪ್ಪತ್ತೈದು ವರ್ಷದ ಮುದ್ದಾದ ಹೆಣ್ಣುಮಗಳಿದ್ದಾಳೆ. ಅವಳಿಗೆ ಕೃಷ್ಣ ವರ್ಣದ - ನೀಳವಾದ ಕೇಶರಾಶಿ ಇತ್ತು. ಸಾಮಾನ್ಯವಾಗಿ ''ಮೂಗಿನ ಮೇಲೆ ಕೋಪ?'' ಎಂದು ಹೇಳುವುದು ರೂಢಿ. ಆದ್ರೆ ಅವಳಿಗೆ ಇಡೀ ಮುಖದ ಮೇಲೆ ಕೋಪ. ಕೋಪ ಬಂದ್ರೆ ಸಾಕು - ಮುಖ ಗಂಟಿಟ್ಕೊಂಡು ರೂಂ ನೊಳಕ್ಕೆ ಹೋಗೋದು ಕನ್ನಡಿ ಮುಂದೆ ಕೂತ್ಕೊಳ್ಳೋದು - ಸರಿಯಾಗಿರೊ ಜಡೇನ ಬಿಚ್ಚೋದು - ಕನ್ನಡಿಯಲ್ಲಿ ನೋಡ್ಕೊಳ್ಳೋದು - ಮುಖ ಸೊಟ್ಟಗೆ ಮಾಡ್ಕೊಳ್ಳೋದು - ಜಡೆ ಹೆಣೆದು ಕೊಳ್ಳೋದು - ಹೆಣೆದ ಜಡೆ ಬಿಚ್ಚೋದು - ಮತ್ತೆ ಮೂತಿ ಸೊಟ್ಟಗೆ ಮಾಡ್ಕೊಳ್ಳೋದು - ಮತ್ತೆ ಜಡೆಬಿಚ್ಚೋದು.

ಇದರ ಫಲಿತಾಂಶ ಏನಾಗಿದೆ ಗೊತ್ತೆ? ಕಂತಿನ ಮೇಲೆ ದಿನಕ್ಕಿಷ್ಟು ಕೂದಲು ಉದುರುತ್ತಾ ಬಂದು ''ಎವರ್ ಗ್ರೀನ್ ಫಾರೆಸ್ಟ್'' ಆಗಿದ್ದ ತಲೆ ಸಹರ ಮರುಭೂಮಿ ಆಗ್ತಾ ಇದೆ. ಶೇಕಡ ಅರವತ್ತು ಭಾಗ ತಲೆ ಕಂಪ್ಲೀಟ್ ಷೈನಿಂಗು - ರೆಡ್ ಆಕ್ಸೈಡ್ ಫ್ಲೋರಿಂಗು ಆಗಿದೆ.

ನಮ್ಮ ಮೂಲೆ ಮನೆ ಮಂಜಮ್ನೋರಿಗೆ ಒಂದು ಸತ್ಸಂಪ್ರದಾಯ ಇದೆ. ಕೋಪ ಬಂದ್ರೆ ಸುಮ್ನೆ ಅಲೆಯೋಕೆ ಹೊರಟ್ಬಿಡ್ತಾರೆ. ಗೊತ್ತಿಲ್ಲ - ಗುರಿಯಿಲ್ಲ - ಯಾರ ಕೈಲೂ ಮಾತೂ ಇಲ್ಲ. ದಾರಿಯಲ್ಲಿ ಎದುರಾದ ಪಶು-ಪಕ್ಷಿ-ಮಹಿಷ-ಶುನಕ-ಗಾರ್ಧಭ - ಎಲ್ಲವನ್ನೂ ಶಪಿಸುವುದು - ಗೊಣಗುವುದು - ಮನೆಗೆ ಬಂದು ಪುಷ್ಕಳವಾಗಿ ಹೊಡೆದು ಮಲಗುವುದು.

ನಮ್ಮ ಬೀದಿಯಲ್ಲಿ ಹಳೆಯ ಕಾಲದ ರಿಟೈರ್ಡ್ ಅಧಿಕಾರಿ ಒಬ್ಬರಿದ್ದಾರೆ. ಅವರ ಸೊಸೆ ಸಸ್ಯಪ್ರೇಮಿ - ಮನೆಯ ಸುತ್ತ ಸೊಗಸಾದ ಕೈ ತೋಟ ಮಾಡಿದ್ದಾರೆ. ಅದು - ಹೂವು - ಹಣ್ಣು - ತರಕಾರಿಗಳಿಂದ ತುಂಬಿದೆ. ರಾಯರಿಗೆ ಕೋಪ ಬಂದ್ರೆ - ಒಂದೊಂದಾಗಿ ಗಿಡ ಕೀಳುವುದು - ಎಲೆ ಕೀಳುವುದು - ಹೂವು ಕಿತ್ತು ಎಸೆಯುವುದು - ಕಾಲಲ್ಲಿ ಹೊಸಕುವುದು ಪದ್ಧತಿ. ಈಗ ಆ ಸುಂದರವಾದ ತೋಟ ಮರಳುಗಾಡು ಆಗ್ತಾ ಇದೆ.

ನಮ್ಮ ಮುಂದಿನ ಬೀದಿಯಲ್ಲಿ ಒಂದು ಸಂಸಾರವಿದೆ. ಅಲ್ಲಿ ಅತ್ತೆ ಬಹಳ ಮುಂಗೋಪಿ. ಅದೂ ನಿಷ್ಕಾರಣವಾಗಿ ಕೋಪಿಸ್ಕೊಳ್ಳೋದು. ಪಾಪ! ಸೊಸೆ-ನಯ-ವಿನಯ

ಸ್ವಭಾವದವಳು. ಹಿರಿಯರಲ್ಲಿ ಗೌರವ - ಎದುರು ವಾದಿಸುವವಳಲ್ಲ. ಆದ್ರೆ ಕಾರಣವೇ ಇಲ್ಲದೆ ಅತ್ತೆ ಕೋಪಿಸಿಕೊಂಡು ಸುಮ್ಮನೆಗೊಣಗಿದಾಗ - ಇಂಥಾ ಸೊಸೆಗೂ ಒಂದು ಸಲ ಕೋಪ ಬಂದೇ ಬರುತ್ತೆ - ಅದು ಸಹಜ - ಅಲ್ವೇ? ಆಗ - ಈ ಮೃದು ಸ್ವಭಾವದ ಸೊಸೆಗೆ ಕೋಪ ಶಮನ ಹೇಗಾಗ ಬೇಕು? ಅಡಿಗೆ ಮನೆಯಲ್ಲಿ ಸ್ಪೂನು - ಲೋಟಗಳಿಂದ ಕೊಳಗ ತಪ್ಪಲೆಯವರೆಗೆ - ಬಾತ್ ರೂಂ ನಲ್ಲಿ - ತಂಬಿಗೆ - ಮಗ್ಗುಗಳಿಂದ ಡ್ರಂ ವರೆಗೆ ನೀರು ತುಂಬುವುದು. ಮತ್ತೆ - ಅತ್ತೆಗೆ ಕೋಪ ಶಮನ? ಇದನ್ನೆಲ್ಲಾ ನೋಡಿ "ಅಯ್ಯೋ! ಏನ್ಸಂತೆ? - ಇದೇನೇ ಅನ್ಯಾಯ? - ನಿನ್ಗೆ ಯಾರೆ ನೀರು ತುಂಬು ಅಂತ ಹೇಳಿದ್ದು?" - ಅಂತ ಆ ನೀರನ್ನೆಲ್ಲಾ ಬಚ್ಚಲಿಗೆ ಸುರಿಯೋದು ಹೇಗಿದೆ?

"ಬಿಸಿ" - ಆರಬೇಕಾದ್ರೆ ತಣ್ಣೀರು ಸುರೀಲೇ ಬೇಕು - ಅಲ್ವೇ?

ಕೆಲವರಿಗೆ ತಮ್ಮ ಹೆಂಡತಿಯ ಮೇಲೆ ಕೋಪ ಬಂದಾಗ ತಮ್ಮ ಮಕ್ಕಳನ್ನು ಹಿಡಿದು ಚಚ್ಚೋದು - ಮಕ್ಕಳ ಮೇಲೆ ಕೋಪ ಬಂದಾಗ ಪಕ್ಕದ ಮನೆಯವರ ಮೇಲೆ ರೇಗೋದು - ಪದ್ಧತಿ : ಕೆಲವು ಶೂರ ಅಧಿಕಾರಿಗಳಂತೂ ತಮ್ಮ ಪತ್ನಿಯರ ಮೇಲೆ ಕೋಪ ಬಂದಾಗ ತಮ್ಮ ಆಫೀಸಿನ ನೌಕರರ ಮೇಲೆ ಪ್ರತಾಪ ತೋರಿಸುವುದು ಸಾಮಾನ್ಯ. ಪಾಪ! ಆ ಬಡ ನೌಕರರು? ಮನೆಗೆ ಹೋಗಿ ತಮ್ಮ ಅರ್ಧಾಂಗಿಯರ ಗ್ರಹಚಾರ ಬಿಡಿಸುವುದು - ಅವರು - ಅವರ ಮಕ್ಕಳ ಜನ್ಮಜಾಲಾಡಿಸುವುದು - ಇದು ಒಂದು ಸಂಪ್ರದಾಯ.

ನಮ್ಮ ಚಿಕ್ಕಪ್ಪನವರಿಗೆ ಕೋಪ ಬಂದಾಗ ನಿಧಾನವಾಗಿ ಒಂದೊಂದೇ ಕಡ್ಲೆಕಾಯಿ ಬೀಜ ತಿನ್ನುವುದು ಪದ್ಧತಿ. ಅವರ ಕೋಪ ಶಮನಕ್ಕೆ ಕನಿಷ್ಠ ಅಂದರೆ ಎರಡು ಮೂರು ಕೆ.ಜಿ. ಕಡಲೆ ಕಾಯಿ ಯಾದರೂ ಬೇಕು. ಇದರಲ್ಲಿ ಇನ್ನೊಂದು ಸ್ವಾರಸ್ಯ. ಒಂದು ವೇಳೆ ಇವರ ಕೈಗೆ ಸಿಕ್ಕಿದ್ದು ಖಾರದ ಕಡ್ಲೆ ಕಾಯಿ ಬೀಜವಾಗಿದ್ದು. ಅದಕ್ಕೇನಾದ್ರೂ ಖಾರ ಹೆಚ್ಚಾಗಿದ್ರೆ - ಖಾರ ಹೆಚ್ಚಿದಷ್ಟೂ ಕೋಪ ಹೆಚ್ಚು - ಕೋಪ ಹೆಚ್ಚಿದಷ್ಟೂ ತಿನ್ನೋದು ಹೆಚ್ಚು - ಮತ್ತೆ ಖಾರ. ಮತ್ತೆ ಕೋಪ. ಮತ್ತೆ ತಿನ್ನೋದು. ಇದಕ್ಕೆಕೊನೆ?

ಒಂದು ಸಲ ನಮ್ಮ ತಂದೆಯವರ ಸ್ನೇಹಿತರೊಬ್ಬರ ಮನೆಗೆ ಹೋಗಿದ್ವಿ. ಅವರ ಆರು ವರ್ಷದ ಮೊಮ್ಮಗ ಒಂದು ಪ್ಲೇಟಿನಲ್ಲಿ ಐದಾರು ವಡೆಗಳನ್ನಿಟ್ಟುಕೊಂಡು ತಿನ್ನುತ್ತಾ ಇದ್ದ.

"ನೋಡೋ - ಯಾರು ಬಂದಿದ್ದಾರೆ - ನಮಸ್ತೆ ಮಾಡೋ." - ಅಂದ್ರು ತಾತ. ಅವನು ಮುಖ ಗಂಟಿಟ್ಕೊಂಡು ಕೂತಿದ್ದ - ತಿರುಗಿ ಕೂಡಾ ನೋಡ್ಲಿಲ್ಲ.

"ಅವನ್ನ ಮಾತ್ನಾಡಿಸ್ಬೇಡಿ - ಅವನಿಗೆ ವಿಪರೀತ ಕೋಪ ಬಂದಿದೆ" - ಅಂದ್ರು ಅಜ್ಜಿ.

"ಇಲ್ಲೇ - ಸ್ವಲ್ಪ ಕೋಪವೇ ಬಂದಿರೋದು. ಪಾಪ! ನೋಡು - ಅವನು ಇನ್ನೂ ಎರಡು ವಡೇನೇ ತಿಂದಿರೋದು."

"ಏನ್ಸಾರ್ ಇದು?" - ಅಂದೆ

"ಹೌದಯ್ಯಾ - ಒಂದು ದಿನ ನಮ್ಮನೇಲಿ ವಡೆಮಾಡಿದ್ವಿ - ಬಿಸಿ ಬಿಸಿಯಾಗಿ ಚೆನ್ನಾಗಿತ್ತು. ಆದ್ರೆ ಅವತ್ತು ಇವನಿಗೆ ಮೈಯಲ್ಲಿ ಹುಷಾರಿರ್ಲಿಲ್ಲಾಂತ ಅವನಿಗೆ ಕೊಡ್ಲಿಲ್ಲ. ತನ್ನನ್ನು ಬಿಟ್ಟು

ತಿಂದ್ರಲ್ಲಾಂತ ಕೋಪ ಅವನಿಗೆ. ಅದಕ್ಕೇ ವಡೆ ಸಿಕ್ಕಿದ್ರೆ ಸಾಕು ಆ ಕೋಪಾನೆಲ್ಲಾ ವಡೆ ಮೇಲೆ ತೀರಿಸ್ಕಿಸ್ತಾನೆ" - ಅಂದ್ರು ತಾತ.

ಎರಡುವಡೆ ತಿಂದ್ರೆ ಸಾಧಾರಣ ಕೋಪ! ನಾಲ್ಕಾದ್ರೆ ಬಹಳ ಕೋಪ! ಆರಾದ್ರೆ ವಿಪರೀತ ಕೋಪ! ಎಂಟಾದ್ರೆ ಉಗ್ರ ಕೋಪ! ಎಂಟರ ಮೇಲಾದ್ರೆ ಪ್ರಚಂಡ ಕೋಪ! ಇನ್ನು ಭಯಂಕರ ಕೋಪವಾದ್ರೆ?- ಮಾಡಿರುವ ವಡೆಗಳೇ ಸಾಲೋಲ್ಲ.

ಹೇಗಿದೆ? - ವೆಹಿಕಲ್‌ಗಳ ವೇಗಕ್ಕೆ - "ಸ್ಪೀಡಾ ಮೀಟರ್" - ಇದ್ದಾಗೆ - ಇವನ ಕೋಪಕ್ಕೆ - "ವಡಾ ಮೀಟರ್."

ನಮ್ಮ ಎದುರು ಮನೆಯಲ್ಲಿ ಒಬ್ಬ ಭಕ್ತ ಮಹಾಶಯರಿದ್ದಾರೆ. ಭಕ್ತಿ - ಪೂಜೆ - ನೇಮ - ನಿಷ್ಠೆ - ಎಲ್ಲಾಸರೇ. ಆದ್ರೆ ಅವರಿಗೇನಾದ್ರೂ ಕೋಪ ಬಂದ್ರೇ - ಆ ದೇವರೇ ದಿಕ್ಕು!

ಅಷ್ಟೇ ಅಲ್ಲ - ಆ ದೇವರಿಗೂ ಬೇರೆ ದೇವರೇ ದಿಕ್ಕು!

ಕೋಪವೆಲ್ಲಾ ಘಂಟೆಯ ಮೇಲೆ. ಎಷ್ಟು ಬೇಗ ಬೇಗ - ಎಷ್ಟು ಗಟ್ಟಿಯಾಗಿ - ಎಷ್ಟು ಹೊತ್ತು ಸಾಧ್ಯವೋ ಅಷ್ಟೂ ಘಂಟಾನಾದ.

ಏಳೆಂಟು ಬಾಂಬೆ ಲಾರಿಗಳು - ಆಂಬ್ಯುಲೆನ್ಸ್‌ಗಳು - ಫೈರ್ ಇಂಜಿನ್‌ಗಳು - ಜೊತೆಗೆ ಒಂದೆರಡು ಆಟೋಗಳು ಒಟ್ಟಿಗೇ ಬಂದಷ್ಟು ಶಬ್ದ.

ಹೆಚ್ಚು ಕೋಪ - ಹೆಚ್ಚು ಘಂಟಾನಾದ.

ಸಾಮಾನ್ಯವಾಗಿ ಯಜಮಾನರಿಗೆ ಕೋಪ ಬಂದರೆ ಮಕ್ಕಳನ್ನು ಡಾಕ್ಟರ್ ಹತ್ತಿರ ಕರೆದುಕೊಂಡು ಹೋಗ್ಬೇಕಾಗುತ್ತೆ. ಯಜಮಾನನಿಗೆ ಕೋಪ ಬಂದರೆ ಪಾತ್ರೆಗಳಿಗೆ ತಳ ಕಟ್ಟಿಸಬೇಕಾಗುತ್ತೆ.

ಈಗ ಅರ್ಥವಾಯ್ತಾ? - "ಕಾವೇರಮ್ನೋರಿಗೆ ಕೋಪ ಬಂದಾಗ ನೋಡ್ಬೇಕು" - ಅಂದ್ರೆ ಏನು ನೋಡ್ಬೇಕು ಅಂತ?

ಕೇವಲ ಕಾವೇರಮ್ನೋರಿಗೆ ಮಾತ್ರ ಕೋಪ ಬಂದಾಗ ನೋಡಿದ್ರೆ ಸಾಲದು - ಯಾವ ಅಮ್ನೋರಿಗೇ ಆಗ್ಲಿ - ಯಾವ ಅಪ್ನೋರಿಗೇ ಆಗ್ಲಿ - ಕೋಪ ಬಂದಾಗ ನೋಡ್ಬೇಕು.

ಆಗ್ಲೇ ಇರೋದು - ಸ್ವಾರಸ್ಯ - ಸುಖ - ಸಂತೋಷ - ಹಾಗೂ ಮನೋರಂಜನೆ.

❖

ರಾಮು ಶಾಲೆಗೆ ಲೇಟಾಗಿ ಬಂದ ಯಾಕೋ ಅಂದರೆ ನಾನು ಕನಸಿನಲ್ಲಿ ಫುಟ್ ಬಾಲ್ ಮ್ಯಾಚ್ ಆಡುತ್ತಿದ್ದೆ ಅಂದ. ಮೇಷ್ಟ್ರು ಸಿಟ್ಟಾಗಿ ಅದಕ್ಕೂ ಇದಕ್ಕೂ ಏನು ಸಂಬಂಧ ಅಂದರೆ ಮ್ಯಾಚ್ ನಡೀತಾ ನಡೀತಾ ಅದು ಎಕ್ಸ್ಟ್ರಾ ಟೈಮ್‌ಗೆ ಹೋಯಿತು. ಅದಕ್ಕೆ ನಾನು ಎದ್ದಿದ್ದು ಲೇಟು ಅಂದ.

- ಸುಕೇಶವ

ಕೊರವಂಜಿ ಅಪರಂಜಿ ಟ್ರಸ್ಟ್ ಅರ್ಪಿಸುವ

ಹಾಸ್ಯ ದಿಗ್ಗಜರಾದ ಕೇಫ ಮತ್ತು ಪರ್ವತವಾಣಿ ಸಂಸ್ಮರಣೆಯ

ಹಾಸ್ಯೋತ್ಸವ 2008

ಚಾಲನೆ ನೀಡುವವರು	:	ಡಾ|| ಗುರುರಾಜ ಕರ್ಜಗಿ
ಕೇಫ ಸಂಸ್ಮರಣೆ	:	ಪ್ರೊ|| ಅ.ರಾ. ಮಿತ್ರ
ಪರ್ವತವಾಣಿ ಸಂಸ್ಮರಣೆ	:	ಎಸ್. ಶಿವರಾಂ
ಕೇಫ ಅವರ ಕಿರು ಪ್ರಹಸನ	:	ಗಾನ ವಿನೋದಿನಿ ತಂಡ
ಪರ್ವತವಾಣಿಯವರ ವಾರ್ಷಿಕೋತ್ಸವ	:	ಭಾರ್ಗವಿ ನಾರಾಯಣ್ ತಂಡ
ಹಾಸ್ಯ ರಸಧಾರೆ	:	ಮಾಸ್ಟರ್ ಹಿರಣ್ಣಯ್ಯ
ಗಾನ ವಿಹಾರ	:	ಶರತ್ ಕಾಳಿಂಗರಾವ್
ಹಾಸ್ಯ ಸಿಂಚನ	:	ಗಂಗಾವತಿ ಪ್ರಾಣೇಶ್
ಹೀಗಾದ್ರೆ ಹೇಗೆ ಪ್ರಹಸನ	:	ಸುಂದರ್ ಮತ್ತು ಲಕ್ಷ್ಮಿ ಚಂದ್ರಶೇಖರ್
ಪರ್ವತವಾಣಿ ಹೆಜ್ಜೆ ಗುರುತು	:	ಯಮುನಾಮೂರ್ತಿ

ಗೌರವ ಸಮರ್ಪಣೆ : ಹಿರಿಯ ಲೇಖಕ ಬಾಗೂರು ಚಂದ್ರುಅವರಿಗೆ

ಎಂದಿನಂತೆ ರಸಪ್ರಶ್ನೆ ಕಾರ್ಯಕ್ರಮ ಮತ್ತು
ಗಾನವಿನೋದಿನಿ ತಂಡದಿಂದ ಹಾಸ್ಯಗಾನ ವೈವಿಧ್ಯ

ಉಸ್ತುವಾರಿ: ಪ್ರೊ|| ಅ.ರಾ. ಮಿತ್ರ
ಸಹ ಉಸ್ತುವಾರಿ: ಬೇಲೂರು ರಾಮಮೂರ್ತಿ

ಗುರುವಾರ, 25-12-2008 - ಬೆಳಗ್ಗೆ 10.00 ಗಂಟೆಗೆ
ಸ್ಥಳ: ಎಚ್.ಎನ್. ಕಲಾಕ್ಷೇತ್ರ, ಜಯನಗರ, ಬೆಂಗಳೂರು

ತಮಗೆಲ್ಲರಿಗೂ ಆದರದ ಸ್ವಾಗತ

ಎಂ. ಶಿವಕುಮಾರ್
ಮ್ಯಾನೇಜಿಂಗ್ ಟ್ರಸ್ಟಿ
ಕೊರವಂಜಿ ಅಪರಂಜಿ ಟ್ರಸ್ಟ್

ಬೇಲೂರು ರಾಮಮೂರ್ತಿ
ಕೆ. ಶ್ರೀನಿವಾಸ್
ಹಾಸ್ಯೋತ್ಸವ ಸಂಚಾಲಕರು

ಹಾಸ್ಯ ಬ್ರಹ್ಮ ಟ್ರಸ್ಟ್

(ಸಾಹಿತ್ಯಾಧಾರಿತ ಸದಭಿರುಚಿಯ ಹಾಸ್ಯ ಚಟುವಟಿಕೆಯ ಸಂಸ್ಥೆ)

S-497, 9ನೇ ಅಡ್ಡರಸ್ತೆ, 9ನೇ ಮೇನ್, ಭಾರತೀಯ ನಗರ, ಮಾಗಡಿ ರಸ್ತೆ,
ಬೆಂಗಳೂರು - 91

: ಸಹಯೋಗ :

• ಗಾಂಧಿ ಸಾಹಿತ್ಯ ಸಂಘ • ಅಭಿನವ ಪ್ರಕಾಶನ • ಸಂಚಯ

ಆಚರಿಸುವ

ಜಿ.ಪಿ. ರಾಜರತ್ನಂ
ಶತಮಾನೋತ್ಸವ ಸಮಾರೋಪ

ದಿನಾಂಕ : ಡಿಸೆಂಬರ್ 5 ಶುಕ್ರವಾರ (5-12-2008)



ಉಪನ್ಯಾಸ : ಪ್ರೊ. ಅ.ರಾ. ಮಿತ್ರ

ವಿಷಯ : ರಾಜರತ್ನಂ - ಒಂದು ಮರು ನೆನಪು

ಮುಖ್ಯ ಅತಿಥಿ : ಶ್ರೀ ಹೊ. ಶ್ರೀನಿವಾಸಯ್ಯ

ಅಧ್ಯಕ್ಷತೆ : ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ

ಕವಿ ಗೋಷ್ಠಿ

ದಿನಾಂಕ : 06-12-2008 ಶನಿವಾರ

ಸಮಯ : ಸಂಜೆ 6-30 ರಿಂದ 8-00

ಸ್ಥಳ : ಗಾಂಧಿ ಸಾಹಿತ್ಯ ಸಂಘ

ಅಧ್ಯಕ್ಷತೆ : ಅಪರಂಜಿ ಶಿವು

ಸರ್ವರಿಗೂ ಆದರದ ಸುಸ್ವಾಗತ

ಅಂತರ್ಜಾಲದ ಇಣುಕುಗಳು

- ವಾಣಿ ಸುರೇಶ್

ಆ ದಟ್ಟವಾದ ಕಾಡಿನಲ್ಲಿ ತನ್ನನ್ನು ಅಟ್ಟಿಸಿಕೊಂಡು ಬರ್ತಿದ್ದ ಹುಲಿಯಿಂದ ತಪ್ಪಿಸ್ಕೊಳ್ಳೋದಕ್ಕೆ ಅವನು ಓಡ್ತಿದ್ದ. ಕ್ಷಣಕ್ಷಣಕ್ಕೂ ಅವರಿಬ್ಬರ ನಡುವಣ ಅಂತರ ಕಡಿಮೆ ಆಗ್ತಾ ಇತ್ತು. ಕೊನೆಗೆ ಆ ದೈವಭಕ್ತನಿಗೆ ಒಂದು ಐಡಿಯಾ ಹೊಳೀತು. ತಕ್ಷಣ ಅವನು ತನ್ನ ಇಷ್ಟದೈವದಲ್ಲಿ ಮೊರೆಯಿಟ್ಟ.

'ಓ ಯೇಸುಸ್ವಾಮಿಯೇ, ಇದೊಂದು ಬಾರಿ ನನ್ನನ್ನು ರಕ್ಷಿಸು. ಈ ದುಷ್ಟ ಹುಲಿಯನ್ನು ನಿನ್ನ ಭಕ್ತನನ್ನಾಗಿ ಬದಲಿಸು. ಅನಂತರ ಏನು ಬಂದರೂ ಅದನ್ನು ನಗುನಗುತ್ತಾ ಸ್ವೀಕರಿಸುವೆ.'

ಒಮ್ಮೆಂದೊಮ್ಮೆಲೇ ಕೇವಲ ಎರಡಡಿ ದೂರದಲ್ಲಿದ್ದ ಹುಲಿ ಗಕ್ಕನೆ ನಿಂತು, ಮೊಣಕಾಲೂರಿ ಪ್ರಾರ್ಥಿಸತೊಡಗಿತು. 'ಓ ಸ್ವರ್ಗದಲ್ಲಿರುವ ಪರಮದಯಾಳುವಾದ ತಂದೆಯೇ, ನನಗೆ ಇಂದಿನ ಆಹಾರವನ್ನಿತ್ತದ್ದಕ್ಕೆ ಧನ್ಯವಾದಗಳು. ನಿನ್ನ ಸ್ವೀಕಾರಕ್ಕಾಗಿ ದಯಮಾಡಿ ಅದನ್ನೀಗ ಪವಿತ್ರಗೊಳಿಸು.'

★★★

'ಮರ್ಯಾದೆಯಿಂದ ನಿನ್ನ ಹಣ ಕೊಡ್ತೀಯೋ, ಇಲ್ಲ ಚೂರಿ ಹಾಕಲೋ' ಮಸಕುಧಾರಿ ಲೋಡ್ ಷೆಡ್ಡಿಂಗ್ ಕತ್ತಲಲ್ಲಿ ಟ್ರಿಂ ಆಗಿ ಹೋಗ್ತಿದ್ದೋನ್ನ ಬೆದರಿಸಿದ.

'ನಿನ್ನ ಬೆದರಿಕೆಗೆಲ್ಲಾ ಜಗ್ಗಲ್ಲ ನಾನು. ಈ ರಾಜ್ಯದ ಮಂತ್ರಿ ನಾನು ತಿಳ್ಕೋ' ಎದುರಿನ ವ್ಯಕ್ತಿ ನಿಶ್ಚಿಂತೆಯಿಂದ ಹೇಳಿದ.

'ಹಾಗಾದ್ರೆ ನನ್ನ ಹಣ ವಾಪಸ್ ಕೊಡು'

★★★

ಹುಚ್ಚಾಸ್ಪತ್ರೆಯ ಒಳಗಿದ್ದ ಸ್ವಿಮಿಂಗ್ ಪೂಲಿನ ಪಕ್ಕದಲ್ಲಿ ದಂಪತಿಗಳು ನಡೀತಿದ್ದರು. ಗಂಡ ಇದ್ದಕ್ಕಿದ್ದಂತೆ ಕೊಳದೊಳಗೆ ಜಿಗಿದ. ಮೇಲಕ್ಕೇಳಲಿಲ್ಲ. ಹೆಂಡತಿ ತಕ್ಷಣ ತಡಮಾಡದೇ ತಾನೂ ಜಿಗಿದು ನೀರಿನಲ್ಲಿ ಮುಳುಗಿ ಗಂಡನನ್ನು ಎತ್ತಿ ಎಳೆದು ತಂದಳು. ಪ್ರಥಮ ಚಿಕಿತ್ಸೆಯ ನಂತರ ಆತ ಚೇತರಿಸಿಕೊಂಡ. ಮರುದಿನ ಆಕೆಯ ಸಮಯಸ್ಫೂರ್ತಿಯಿಂದ ಉತ್ತೇಜಿತರಾದ ಡಾಕ್ಟರು ಆಕೆಯನ್ನ ಕರೆಸಿದರು. 'ನಿಮ್ಮ ಅವಧಿಗೆ ಮುಂಚೆಯೇ ನಿಮ್ಮನ್ನ ಡಿಸ್ಚಾರ್ಜ್ ಮಾಡ್ಬೇಕೂ ಅಂತ ಇದ್ದೇವೆ. ವಿನಾಕಾರಣ ನಿಮ್ಮ ಪತಿ ನಿನ್ನೆ ರಾತ್ರಿ ಆತ್ಮಹತ್ಯೆ ಮಾಡಿಕೊಂಡಿದ್ದರಿಂದ ಅವರನ್ನ ನಿಮ್ಮ ಜೊತೆಗೆ ಕಳಿಸಕ್ಕಾಗ್ತಾ ಇಲ್ಲ ಅದಕ್ಕೆ ವಿಷಾದಿಸ್ತೇವೆ' ಅಂದರು ಡಾಕ್ಟರು.

'ಅಯ್ಯೋ ಅದು ಆತ್ಮ ಹತ್ಯೇನೂ ಅಲ್ಲ, ಗೀತ್ಮಹತ್ಯೇನೂ ಅಲ್ಲ. ನಂದು ತೊಪ್ಪೆ ಆಗಿದ್ದರಿಂದ ನಾನೇ ಅವರ್ನ ಬಾತ್ ರೂಮ್ ಫ್ಯಾನಿಗೆ ಹಗ್ಗಕಟ್ಟಿ ಒಣಗುಕ್ಕೆ ಹಾಕಿದ್ದೆ ಅಷ್ಟೇ.'

★★★

ಹೈವೇನಲ್ಲಿ ಅನೇಕರು ಒಟ್ಟೊಟ್ಟಿಗೆ ಓಡುತ್ತಿದ್ದದ್ದನ್ನ ನೋಡಿ ಗುಂಡ ಪಕ್ಕದವರನ್ನ ವಿಚಾರಿಸಿದ.

ಗುಂಡ : ಅವರೆಲ್ಲಾ ಯಾಕೆ ಹಾಗೆ ಓಡ್ತಿದಾರೆ?

ವ್ಯಕ್ತಿ : ಅವರೆಲ್ಲಾ ಮ್ಯಾರಥಾನ್‌ಗಾಗಿ ಓಡ್ತಿದಾರೆ.

ಗುಂಡ : ಹಾಗೆ ಓಡೋದ್ರಿಂದ ಅವರಿಗೆ ಏನು ಸಿಗುತ್ತೆ?

ವ್ಯಕ್ತಿ : ಮುಂಚೆ ಓಡಿದೋನಿಗೆ ಬಹುಮಾನ ಸಿಗುತ್ತೆ.

ಗುಂಡ: ಹಾಗಾದ್ರೆ ಮಿಕ್ಕೋರೆಲ್ಲಾ ಯಾಕೆ ಓಡ್ತಿದಾರೆ?

❖

ವಕ್ರ ಪದಬಂಧ - ಸರಿಯುತ್ತರಗಳು:

ನವೆಂಬರ್ ಪದಬಂಧ :

ಎಡದಿಂದ ಬಲಕ್ಕೆ : 1. ಪತಿ, 3. ರಮಣಿ, 6. ಹದ, 7. ಕಂದ, 8. ಅಪಹಾಸ್ಯ, 9. ರಾಬರಿ, 10. ರತಿ, 12. ಸುಳಿ, 13. ಕಲಾವಿದ, 14. ನೆರವಿ, 15. ಕುರಿಗಳು, 17. ಕುಚೇಲ, 18. ಅಕಾಲ, 19. ಜವ್ವನ

ಮೇಲಿನಿಂದ ಕೆಳಕ್ಕೆ : 2. ತಿರುಪತಿ, 3. ರಹಸ್ಯ, 4. ಮದ, 5. ಮದರಾಸು, 7. ಕಂಬಳಿ, 8. ಅರಮನೆ, 11. ರವಿಕುಲಜ, 13. ಕವಿಕುಲ, 16. ಗಗನ,

ಈ ಸಂಚಿಕೆಯ ಪದಬಂಧ:

ಎಡದಿಂದ ಬಲಕ್ಕೆ : 1. ಅಪ್ಪ ಅಮ್ಮ, 3. ಸರಾಗ, 5. ವಿರಾಮ, 6. ಸವಾಲು ಜವಾಬು, 9. ಲೋಹ, 10. ನಾಕ, 12. ಅದಟು, 13. ಅತಿಸಾರಸೌಧ, 16. ವಾರಿ, 17. ರಮಣ, 19. ಬಿಂದಿಗೆ, 20. ಗಲ್ಲ

ಮೇಲಿನಿಂದ ಕೆಳಕ್ಕೆ : 1. ಅರಸ, 2. ಅಳಿಲು, 3. ಸರಾಬು, 4. ರಾಮ, 5. ವಿವಾಹ, 7. ವಾದಿಪ್ರತಿವಾದಿ, 8. ಜಲೋದರ, 10. ನಾದ, 11. ಕಟುಕ, 12. ಅಧಮ, 14. ಸಾರಿಗೆ, 15. ಸೌರವ, 18. ಗಣ.

Mailing Date
5th of every month
Mailed at Rajajinagar PO

CPMG/KA/BGW-544/2006-2008
RNI-KAR-KAN / 2005 / 15457

Printed by: V.R. NATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003.
Printed at: Ravi Graphics, 53/8, 2nd Main Road, Industrial Town, Rajajinagar, Bangalore - 560 010. Ph : 2330 5999.
Editor : M. SHIVAKUMAR